
ಯೇಸುಕ್ರಿಸ್ತ

ಬಿ.ಎಸ್. ತಲ್ವಾಡಿ



ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ನವಸಾಕ್ಷರ ಪುಸ್ತಕ ಮಾಲೆ

ಲೋಕಶಿಕ್ಷಣ ನಿರ್ದೇಶನಾಲಯ
ನವಸಾಕ್ಷರ ಪುಸ್ತಕ ಮಾಲೆ - ೨೨

ಯೇಸುಕ್ರಿಸ್ತ

ಬಿ.ಎಸ್. ತಲ್ವಾಡಿ

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ-೫೮೩ ೨೭೭

YESUKRISTA : by B. S. Talwadi. Published by The Director of Prasaranga, Kannada University, Hampi - 583 211, KARNATAKA.
First Immpression 1994, Pp. i i + 26, Rs. 8.00.

ಸಂಯೋಜನಾಧಿಕಾರಿ
ಎಚ್. ಎಸ್. ಶ್ರೀಮತಿ
ಪಠ್ಯ ಪುಸ್ತಕ ರಚನಾ ವಿಭಾಗ

ಪ್ರಕಾಶಕರು
ನಿರ್ದೇಶಕರು
ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ - ೫೮೩ ೨೧೧

ಮುಖಪುಟ ವಿನ್ಯಾಸ
ಕೆ. ಮಠಾಳಿ

ಬೆಲೆ : ರೂ. ೮.೦೦

ಮುದ್ರಕರು
ಬೃಂದಾವನ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್ ಪ್ರೈ.ಲಿ.
೧೨/೧೩, ಲಾಲ್‌ಬಾಗ್ ಫೋರ್ಟ್ ರಸ್ತೆ,
ಬೆಂಗಳೂರು – ೫೬೦ ೦೦೪.

ಯೇಸುಕ್ರಿಸ್ತ

ನಾವು ಭಾರತೀಯರು. ನಮ್ಮ ದೇಶ ಭಾರತ. ಇದು ಏಷ್ಯಾಖಂಡದಲ್ಲಿದೆ. ಈ ಏಷ್ಯಾ ಖಂಡದಲ್ಲಿ ಇಸ್ರಾಯೇಲ್ ಎಂಬ ಒಂದು ದೇಶವಿದೆ. ಹಿಂದೆ ಈ ದೇಶಕ್ಕೆ ಪ್ಯಾಲೆಸ್ಟೈನ್ ಎಂಬ ಹೆಸರಿತ್ತು. ಸುಮಾರು ಎರಡು ಸಾವಿರ ವರ್ಷಗಳ ಹಿಂದೆ ಇಲ್ಲಿ ರೋಮಾಂಚಕ ಸಂಗತಿಯೊಂದು ನಡೆಯಿತು.

ಆಗ ಪ್ಯಾಲೆಸ್ಟೈನ್ ದೇಶವನ್ನು ಗಲಿಲೇಯ, ಸಮಾರಿಯಾ, ಜುದೇಯ ಮತ್ತು ಪೆರಿಯಾ ಎಂದು ನಾಲ್ಕು ಭಾಗ ಮಾಡಿದ್ದರು. ಗಲಿಲೇಯದ ರಾಜಧಾನಿ ತಿಬೇರಿಯಾ. ಈ ಪ್ರಾಂತದಲ್ಲಿ ಯೊಹೂದಿ ಜನಾಂಗಕ್ಕೆ ಸೇರಿದ ಜನ ಹೆಚ್ಚಾಗಿದ್ದರು. ಯೆಹೂದಿಗಳು ಅಬ್ರಹಾಮನ ಸಂತಾನದವರು. ಅವರು ದೇವರನ್ನು 'ಯಾವೆ' ಎಂದು ಕರೆಯುತ್ತಿದ್ದರು. ಅವರ ಗುಡಿಗೆ 'ಸಿನಿಶೋಗ್' ಎಂದು ಹೆಸರು. 'ಥೋರಾ' ಅವರ ಧರ್ಮಗ್ರಂಥ. ಅದು ಬೈಬಲಿನ ಹಳೆಯ ಒಡಂಬಡಿಕೆಯ ಸಂಗ್ರಹ.

ರೋಮ್ ದೇಶದ ರೋಮನರು ಪ್ಯಾಲೆಸ್ಟೈನ್ ದೇಶವನ್ನು ಅಂದು ಆಳುತ್ತಿದ್ದರು. ಹೆರೋದ ಎಂಬುವನು ಅಲ್ಲಿನ ರಾಜ. ಅವನು ಬಹಳ ಕ್ರೂರಿ. ಯೆಹೂದಿಗಳಿಗೆ ಬಹಳ ಹಿಂಸೆ ಕೊಡುತ್ತಿದ್ದ. ಅವರು ಆತನ ಹಿಂಸೆಯನ್ನು ತಡೆಯಲಾಗದೆ ದೇವರಿಗೆ ಮೊರೆಯಿಟ್ಟರು.

ಗಲಿಲೇಯ ಪ್ರಾಂತದಲ್ಲಿ 'ನಜರೇತ್' ಒಂದು ಹಳ್ಳಿ. ಇಲ್ಲಿ ಬಹು ಪಾಲು ಜನ ಬೇಸಾಯಗಾರರು. ಪಶುಪಾಲನೆಯನ್ನೂ ಮಾಡುತ್ತಿದ್ದರು. ಹೆಚ್ಚಿನವರು ಕುರಿಕಾಯುತ್ತಿದ್ದರು. ರೈತರು, ವರ್ತಕರು, ದಳ್ಳಾಳಿಗಳು ನಜರೇತ್‌ನ ಸಂತೆಗೆ ಬರುತ್ತಿದ್ದರು. ಅಲ್ಲಿ ದೊಡ್ಡ ಪ್ರಮಾಣದಲ್ಲಿ ವ್ಯಾಪಾರ ನಡೆಯುತ್ತಿತ್ತು. ಹಾಗಾಗಿ ಜನ ಇಲ್ಲಿಗೆ ಹೆಚ್ಚಾಗಿ ವಲಸೆ ಬರುತ್ತಿದ್ದರು.

ನಜರೇತಿನಲ್ಲಿ ದಾವೀದ ರಾಜನ ವಂಶದವರಿದ್ದರು. ದಾವೀದನು ಹುಟ್ಟಿನಿಂದ ಕುರುಬ. ಅವನು ಬಹಳ ಬಲಶಾಲಿಯಾಗಿದ್ದ. ಕವಣೆಯ ಕಲ್ಲಿನಿಂದಲೇ ವೈರಿಗಳನ್ನು ಕೊಲ್ಲುತ್ತಿದ್ದ. ಸೇನಾ ನಾಯಕನಾಗಿದ್ದ ಈತನನ್ನು ಯೆಹೂದಿಯರು ತಮ್ಮ ಅರಸ ಎಂದು ಒಪ್ಪಿಕೊಂಡಿದ್ದರು. ದಾವೀದನು ಜೊರುಸಲೇಮ್ ಪಟ್ಟಣವನ್ನು ಯೆಹೂದಿಗಳ ರಾಜಧಾನಿಯಾಗಿ ಮಾಡಿದ್ದನು. ಈತನ ವಂಶದವರಲ್ಲಿ ಜಾಕೋಬನೂ ಒಬ್ಬ. ಆತನ ಪೂರ್ವಿಕರು ಬೆತ್ಲಹೇಮ್ ಎಂಬ ಹಳ್ಳಿಯಿಂದ ನಜರೇತಿಗೆ ಬಂದಿದ್ದರು. ಜಾಕೋಬನಿಗೆ ಜೋಸೆಫ್ ಎಂಬ ಮಗನಿದ್ದನು. ಅವನು ಬಡಗಿ ಕೆಲಸ ಮಾಡುತ್ತಿದ್ದನು.

ನಜರೇತಿನಲ್ಲಿ ಜೂಕಿಮ ಮತ್ತು ಅನ್ನಾ ಎಂಬ ದಂಪತಿಗಳಿದ್ದರು. ಅವರಿಗೆ ಮರಿಯಾ ಎಂಬ ಸುಂದರಿಯಾದ ಮಗಳಿದ್ದಳು. ಆಕೆ ಬಹಳ ಚೂಟಿಯಾದ ಹುಡುಗಿ. ಗುಡಿಗೆ ಹೋಗಿ ಭಜನೆ ಕಲಿಯುತ್ತಿದ್ದಳು. ಕೀರ್ತನೆಗಳನ್ನು ಸ್ತೋತ್ರಗೀತೆಗಳನ್ನು ಬಾಯಿಪಾಠ ಮಾಡುತ್ತಿದ್ದಳು. ಯೊಹೂದಿಗಳ ಪದ್ಧತಿಯಂತೆ ಕೆಲಕಾಲ ಆಕೆ ಗುಡಿಯಲ್ಲಿದ್ದಳು. ಅಲ್ಲಿ ಗುಡಿಸುವುದು, ಒರೆಸುವುದು ಮುಂತಾದ ಕೆಲಸಗಳನ್ನು ಮಾಡುತ್ತಿದ್ದಳು. ಆಕೆ ಒಂದು ದಿನ ಮನೆಗೆ ಬಂದಳು.

ಅವರ ಬೀದಿಯಲ್ಲೇ ವಾಸವಾಗಿದ್ದ ಜೋಸೆಫನ ಮೇಲೆ ಮರಿಯಾ ತಂದೆತಾಯಿಗಳ ಕಣ್ಣು ಬಿತ್ತು. ಹುಡುಗನಿಗೆ ವಯಸ್ಸು ಸ್ವಲ್ಪ ಹೆಚ್ಚಾಗಿತ್ತು. ಆದರೂ ಜೋಸೆಫನಿಗೇ ಮರಿಯಳನ್ನು ಕೊಡಲು ಒಪ್ಪಿಕೊಂಡರು. ಮಗಳೂ ಮದುವೆಗೆ ಒಪ್ಪಿದಳು.

ಕ್ರಿಸ್ತನ ಜನನ

ಕ್ರಿಸ್ತನ ಜನನದ ಬಗ್ಗೆ ಬೈಬಲ್‌ನಲ್ಲಿ ಒಂದು ಕತೆ ಹೀಗಿದೆ. ಒಂದು ಸಂಜೆ ಮರಿಯಾಳು ಮನೆ ಕೆಲಸ ಮಾಡುತ್ತಿದ್ದಳು ಮನೆಯಲ್ಲಿ ಬೇರೆ ಯಾರೂ ಇರಲಿಲ್ಲ. ತಟ್ಟನೆ



ಕುರುಬರ ಗುಹೆಯಲ್ಲಿ ಕ್ರಿಸ್ತ ಹುಟ್ಟಿದ್ದು

ಅಸಾಧಾರಣ ಬೇಳಕು ಕಾಣಿಸಿತು. ಬೆಳಕಿನ ಹಿಂದೆ ಗಾಬ್ರಿಯೇಲ್ ಎಂಬ ದೂತ ಕಾಣಿಸಿಕೊಂಡು "ನೀನು ದೇವರ ಕೃಪಯಿಂದ ಗರ್ಭವತಿಯಾಗಿ ಮಗನನ್ನು ಪಡೆಯುವೆ. ಆತ ಮಹಾ ಪುರುಷನಾಗುವನು. ತನ್ನ ಅಜ್ಜನಾದ ದಾವಿದನಂತೆ ಅರಸನಾಗುವನು. ಇಸ್ರಾಯೇಲರನ್ನು ಸದಾ ಆಳುವನು" ಎಂದನು.

ದೇವದೂತನ ಮಾತು ಕೇಳಿ ಮರಿಯಾಳಿಗೆ ಹೆದರಿಕೆಯಾಯಿತು. "ಅದು ಹೇಗೆ ಸಾಧ್ಯ? ನನಗಿನ್ನೂ ಮದುವೆಯಾಗಿಲ್ಲ" ಎಂದಳು. " ದೇವರ ಕೃಪೆ ನಿನಗೆ ಒದಗುವುದು. ದೇವರ ಶಕ್ತಿ ನಿನ್ನ ಸಂಗಡ ಇರುವುದು" ಎಂದನು ದೇವದೂತ.

ಒಂದು ದಿನ ರಾತ್ರಿ ಜೋಸೆಫನಿಗೆ ಕನಸು ಬಿತ್ತು. ಆ ಕನಸಿನಲ್ಲಿ ದೇವದೂತ ಕಾಣಿಸಿಕೊಂಡ "ಮರಿಯಾ ಪವಿತ್ರಾತ್ಮನ ಕೃಪೆಯಿಂದ ಗರ್ಭತಾಳಿದ್ದಾಳೆ. ಅವಳಿಗೆ ಹುಟ್ಟುವ ಮಗನೇ ಲೋಕ ರಕ್ಷಕ. ಅವನನ್ನು ಬೆಳೆಸುವ ಭಾರ ನಿನ್ನದು " ಎಂದು ಹೇಳಿದ.

ಆ ನಂತರ ಜೋಸೆಫ್ ಮರಿಯಾಳನ್ನು ವಿಧಿ ಪ್ರಕಾರ ಮದುವೆ ಮಾಡಿಕೊಂಡನು.

ಜೊಸೆಫ್ ಮತ್ತು ಮರಿಯಾ ಸಜರೇತಿನಲ್ಲೇ ವಾಸವಾಗಿದ್ದರು. ಮರಿಯಳಿಗೆ ದಿನ ತುಂಬಿದವು. ಅಗಸ್ಟಸ್ ಎಂಬುವನು ಆಗ ರೋಮಿನ ಚಕ್ರವರ್ತಿ. ಆತ ಜನಗಣತಿಗೆ ಆದೇಶ ಮಾಡಿದ್ದ. ಇದಕ್ಕಾಗಿ ಯೊಹೂದಿಗಳು ತಮ್ಮ ಪೂರ್ವಜರ ನಾಡಿಗೇ ಹೋಗಬೇಕಿತ್ತು. ಜೋಸೆಫ್ ಮತ್ತು ಮರಿಯಾಳ ಪೂರ್ವಜರು ಬೆತ್ಲಹೇಮಿನವರೇ ಅಲ್ಲವೆ? ಹಾಗಾಗಿ ಅವರು ಅಲ್ಲಿಗೆ ಹೋಗಲೇಬೇಕಿತ್ತು.

ಬೆತ್ಲಹೇಮಿಗೆ ಹೋದರು

ನಜರೇತಿನಿಂದ ಬೆತ್ಲಹೇಮಿಗೆ ತುಂಬಾ ದೂರದ ದಾರಿ. ಆಗ ಇಲ್ಲಿಗೆ ಕಾಲು ನಡಿಗೆಯಲ್ಲೇ ಹೋಗಬೇಕಾದ ಪ್ರಸಂಗ. ಇಲ್ಲವೆ ಕತ್ತೆಯ ಮೇಲೆ ಕುಳಿತು ಪ್ರಯಾಣ ಮಾಡಭೇಕಿತ್ತು. ಮರಿಯಾಳನ್ನು ಕತ್ತೆಯ ಮೇಲೆ ಕುಳ್ಳಿರಿಸಿಕೊಂಡು ಪ್ರಯಾಣ ಮಾಡಿದ ಜೋಸೆಫ್.

ಆ ದಂಪತಿಗಳು ಬೆತ್ಲಹೇಮ್ ಹಳ್ಳಿಯನ್ನು ತಲುಪಿದಾಗ ಕತ್ತಲೆ. ಅಂದು ರಾತ್ರಿ ತಂಗಲು ಮನೆ ಅಥವಾ ಛತ್ರ ಸಿಕ್ಕಲಿಲ್ಲ. ಎಲ್ಲಿ ನೋಡಿದರೂ ಜನಗಳೇ ! ಅವರೂ ಸಹ ಜನಗಣತಿಗೆ ಬಂದಿದ್ದವರೆ. ಮರಿಯಾ ತುಂಬಾ ದಣಿದಿದ್ದಳು. ಊರಿನ ಹೊರೆಗೆ ಕೆಲವು ಗುಹೆಗಳಿದ್ದವು. ಅವುಗಳಲ್ಲಿ ಕುರುಬರು ತಮ್ಮ ಕುರಿಮಂದೆಗಳ ಜೊತೆ ವಾಸವಾಗಿದ್ದರು. ಅಂತಹ ಕುರುಬರ ಹಟ್ಟಿಯೊಂದರಲ್ಲಿ ಮರಿಯಾ ಹುಲ್ಲಿನ ಮೇಲೆ ಮಲಗಿದಳು. ಆಗಲೇ ಆಕೆಗೆ ಹೆರಿಗೆಯ ನೊವು ಕಾಣಿಸಿಕೊಂಡಿತು. ಅಲ್ಲಿದ್ದ ಕೆಲವು ಕುರುಬ ಹೆಂಗಸರು ಆಕೆಗೆ ಹೆರಿಗೆ ಮಾಡಿಸಿದರು. ಅವರಲ್ಲಿದ್ದ ಚಿಂದಿ ಬಟ್ಟೆಯಲ್ಲಿ ಮಗುವನ್ನು ಸುತ್ತಿ ಹುಲ್ಲಿನ ಮೇಲೆ ಮಲಗಿಸಿದರು. ಆ ಮಗುವೇ " ಕ್ರಿಸ್ತ ". ಕುರುಬರ ಹಟ್ಟಿಯಲ್ಲಿ ಜನಿಸಿದ ಕರುಣೆಯ ಕಂದ.

ಗಂಡು ಮಗು ಹುಟ್ಟಿದ ಎಂಟು ದಿನಗಳ ನಂತರ ಗುಡಿಗೆ ಹೋಗುವುದು ಯೊಹೂದಿಗಳ ಸಂಪ್ರದಾಯ. ನಾಮಕರಣವೂ ಅಲ್ಲಿಯೇ ಆಗಬೇಕು. ಹಾಗಾಗಿ ಮಗುವನ್ನು ಆ ದಂಪತಿಗಳು ಗುಡಿಗೆ ಎತ್ತಿಕೊಂಡು ಹೋದರು. ಅಲ್ಲಿ ಮಗುವಿಗೆ "ಯೇಸುಕ್ರಿಸ್ತ" ಎಂದು ನಾಮಕರಣ ಮಾಡಿದರು.

ಹೆರಿಗೆಯ ಸೂತಕ ಕಳೆಯಲು ನಲವತ್ತನೆ ದಿನಕ್ಕೆ ಮಗುವನ್ನು ಜೆರುಸಲೇಮಿನ ದೇವಾಲಯಕ್ಕೆ ಕರೆದೊಯ್ದರು. ಅದೇ ಗುಡಿಯಲ್ಲಿ "ಅನ್ನಾ" ಎಂಬ ವಿಧವೆಯಿದ್ದಳು. ಆಕೆ ಮಗುವನ್ನು ಎತ್ತಿಕೊಂಡು "ನೀನು ಲೋಕ ಪ್ರಸಿದ್ಧನಾಗುವೆ" ಎಂದು ಹರಸಿದಳು.

ಹೆರೋದನ ಸಂಚು

ಜ್ಯೋತಿಷಿಗಳು ಯೊಹೂದ್ಯರ ಅರಸನಾಗುವ ಯೋಗ ಈ ಮಗುವಿಗಿದೆ ಎಂದೂ ಹೇಳಿದರು. ಅರಸ ತನ್ನ ವಿರೋಧವಾಗಿ ಜನಿಸಿರುವ ಈ ಮಗುವನ್ನು ಕೊಲ್ಲಲು ಯೋಚಿಸಿದ.

ಆ ಮಗುವಿಗಾಗಿ ಹುಡುಕಿಸಿದ. ಸುಳಿವು ಸಿಕ್ಕಲಿಲ್ಲ. ಕಡೆಗೆ ಬೆತ್ಲಹೇಮಿನಲ್ಲಿದ್ದ ಎರಡು ವರ್ಷದ ಗಂಡು ಮಕ್ಕಳನ್ನೆಲ್ಲಾ ಕೊಲೆ ಮಾಡಿಸಿದ. ಆದರೆ ಜೋಸೆಫ್ ಮತ್ತು

ಮರಿಯಾ ಆ ಸಂದರ್ಭದಲ್ಲಿ ಮಗುವಿನೊಂದಿಗೆ ಈಜಿಪ್ಟ ದೇಶಕ್ಕೆ ಹೋಗಿದ್ದರು. ಕೆಲವು ಕಾಲದ ನಂತರ ಅವರು ಈಜಿಪ್ಟ್‌ನಿಂದ ನಜರೇತಿಗೆ ಹಿಂದಿರುಗಿದರು.

ಕ್ರಿಸ್ತನ ಬಾಲ್ಯ ಜೀವನದ ಬಗ್ಗೆ ನಮಗೆ ಹೆಚ್ಚು ತಿಳಿಯುವುದಿಲ್ಲ. ಆತ ಇತರ ಬಾಲಕರಂತೆ ನಜರೇತಿನ ಪುಟ್ಟ ಮನೆಯಲ್ಲಿ ಬೆಳೆದಿರಬೇಕು. ಆದರೆ ಆತ ಇತರ ಬಾಲಕರಂತಿರಲಿಲ್ಲ. ಸದಾ ಒಂಟಿಯಾಗಿರುತ್ತಿದ್ದ. ಹಿತ್ತಲಿನ ಹಣ್ಣಿನ ಮರಗಳಿಂದ ಹಣ್ಣುಕಿತ್ತು ದಾನ ಮಾಡುತ್ತಿದ್ದ. ತಾನು ಊಟ ಮಾಡುವ ರೊಟ್ಟಿಯನ್ನು ಬಡವರಿಗೆ ಕೊಡುತ್ತಿದ್ದ. ಸಿಹಿತಿಂಡಿಯನ್ನು ಬೇರೆ ಹುಡುಗರಿಗೆ ಕೊಟ್ಟು ಬರುತ್ತಿದ್ದ. ಬಡವರು, ಮುದುಕರು, ದೀನರನ್ನು ಕಂಡರೆ ಕರುಣೆಯಿಂದ ಕರಗಿ ಹೋಗುತ್ತಿದ್ದ.

ಬಾಲ ಕ್ರಿಸ್ತ ಕಳೆದು ಹೋದ

ಈಗ ಕ್ರಿಸ್ತನಿಗೆ ಹನ್ನೆರಡು ವರ್ಷ. ಈ ವಯಸ್ಸಿನ ಹುಡುಗರು ಜೆರುಸಲೇಮಿನ ದೇವಾಲಯಕ್ಕೆ ಹೋಗುವುದು ವಾಡಿಕೆ. ಅಲ್ಲಿ "ಪಾಸ್ಕ" ಹಬ್ಬ ಆಚರಿಸಬೇಕಿತ್ತು. "ಪಾಸ್ಕ" ಎಂದರೆ"ದಾಟಿಹೋಗು" ಎಂದು ಅರ್ಥ. ಇದು ಯೊಹೂದ್ಯರ ದೊಡ್ಡ ಹಬ್ಬ. ಕ್ರಿಸ್ತ ತಂದೆತಾಯಿಗಳು ಜೊತೆ ಜೆರುಸಲೇಮಿಗೆ ಹೋದ. ಅಲ್ಲಿ ಅವರು ಕೆಲವು ದಿನಗಳನ್ನು ಕಳೆದರು. ಹಬ್ಬದ ಉತ್ಸವಗಳೆಲ್ಲ ಮುಗಿಯಿತು. ಅವರು ತಮ್ಮ ಬಂಧುಗಳೊಡನೆ ನಜರೇತಿಗೆ ಮರಳಿದರು. ಬಾಲಕ ಕ್ರಿಸ್ತ ಅವರೊಡನೆ ಬರಲಿಲ್ಲ. ತಂದೆತಾಯಿಗಳಿಗೆ ತಿಳಿಯದಂತೆ ಅಲ್ಲೇ ಉಳಿದುಬಿಟ್ಟ. ಆತಂಕಗೊಂಡ ತಂದೆತಾಯಿಗಳು ಮೂರು ದಿನದ ನಂತರ ಜೆರುಸಲೇಮಿನಲ್ಲೇ ಮಗನನ್ನು ಕಂಡರು. ಆತ ದೇವಾಲಯದಲ್ಲಿ ಬೋಧಕರ ಉಪದೇಶ ಕೇಳುತ್ತಿದ್ದ. ಅವರು ಕೇಳುವ ಪ್ರಶ್ನೆಗಳಿಗೆ ನೇರವಾಗಿ ಉತ್ತರ ಕೊಡುತ್ತಿದ್ದ. ಕ್ರಿಸ್ತನ ಬುದ್ಧಿಗೆ ಆ ಬೋಧಕರು ಮೆಚ್ಚಿದರು. ಮರಿಯಾ ಮಗನ ಬಳಿಗೆ ಬಂದಳು. "ಕಂದಾ ಹೀಗೇಕೆ ಮಾಡಿದ?" ಎಂದು ಕೇಳಿದರೆ, "ನೀವು ನನ್ನನ್ನು ಹುಡುಕಾಡಿದ್ದು ಯಾಕೆ? ನಾನು ನನ್ನ ತಂದೆಯ ಕಾರ್ಯದಲ್ಲಿ ನಿರತನಾಗಿರಬೇಕೆಂದು ನಿಮಗೆ ತಿಳಿಯಲಿಲ್ಲವೆ?" ಎಂದು ಮರುಪ್ರಶ್ನೆ ಮಾಡಿದ.

ಬಳಿಕೆ ಕ್ರಿಸ್ತ ನಜರೇತಿಗೆ ಬಂದು ತಂದೆತಾಯಿಗಳಿಗೆ ವಿಧೇಯನಾಗಿದ್ದ. ಪ್ರಾಯಕ್ಕೆ ತಕ್ಕ ಹಾಗೆ ಜ್ಞಾನದಲ್ಲಿ, ದೇಹ ಬಲದಲ್ಲಿ ಆತ ಚೆನ್ನಾಗಿ ಬೆಳೆದ. ಮರಗೆಲಸ ಮಾಡಿಕೊಂಡು ಮೂವತ್ತು ವರ್ಷ ಅಲ್ಲೇ ಇದ್ದ.

ನಜರೇತಿನ ಹೊಲಗದ್ದೆಗಳಲ್ಲಿ ತಿರುಗಾಡಿದ. ಪ್ರಕೃತಿಯ ಪ್ರಪಂಚದಲ್ಲಿ ವಿಹರಿಸಿದ. ನೊಂದವರ, ಬೆಂದವರ ಜೊತೆ ಮಾತಾಡಿದ. ಸಮಸ್ಯೆಗಳಿಗೆ ಪರಿಹಾರ ಹುಡುಕಿದ. ನ್ಯಾಯ ನೀತಿಯ ಬಗ್ಗೆ ತಿಳಿದುಕೊಂಡ. ಅಂದಿನ ಪುರೋಹಿತರು ಮಾಡುತ್ತಿದ್ದ ಅನ್ಯಾಯಗಳನ್ನು ಕಂಡು ಸಹಿಸದಾದ. ಅವರೊಡನೆ ಕಾದಾಡಲು ಬಲವನ್ನು ಬೆಳೆಸಿಕೊಂಡು. ಆತನ ಕಾಲ ಕೂಡಿ ಬಂದಿತು. ಆತ ಒಂದು ದಿನ ಮನೆಬಿಟ್ಟು ಹೊರಬಂದ.

ಸ್ನಾನ ದೀಕ್ಷೆ



ಕ್ರಿಸ್ತನಿಗೆ ಸ್ನಾನದೀಕ್ಷೆ

ಆದಾಗಲೇ ಅವನಿಗೆ ಯೊಹಾನನ ವಿಚಾರ ತಿಳಿದಿತ್ತು. ಯೊಹಾನ ಜನರಿಗೆ ಜೋರ್ದಾನ್ ನದಿಯಲ್ಲಿ ಸ್ನಾನ ದೀಕ್ಷೆ ಕೊಡುತ್ತಿದ್ದ. ಆತ ಕಾಡಿನಲ್ಲಿದ್ದುಕೊಂಡು ಚರ್ಮದ ಬಟ್ಟೆ ಧರಿಸಿ, ಗೆಡ್ಡೆಗೆಣಸು, ಕಾಡು ಜೇನು ತಿಂದು ಜೀವಿಸುತ್ತಿದ್ದ. ಕ್ರಿಸ್ತ ಯೊಹಾನನ

ಮುಂದೆ ನಿಂತು ಸ್ನಾನ ದೀಕ್ಷೆ ಕೊಡುವಂತೆ ಕೇಳಿದ. ಯೋಹಾನ ಕ್ರಿಸ್ತನ ಕ್ಷಮೆ ಕೇಳಿ "ಸ್ವಾಮಿ ನಿಮ್ಮಿಂದ ನಾನು ಸ್ನಾನ ದೀಕ್ಷೆ ಪಡೆಯಬೇಕು. ಹಾಗಿರುವಾಗ ನೀವೇ ನನ್ನ ಬಳಿಗೆ ಬಂದಿರುವಿರಲ್ಲಾ?" ಎಂದ. ಕ್ರಿಸ್ತ ಮುಗುಳುನಕ್ಕ. "ಯೊಹಾನ, ನೀನು ಹಿಂಜರಿಯಬೇಡ. ಸದ್ಯ ಅದು ಹೀಗೇ ನಡೆಯಬೇಕು. ನಾವು ನೀತಿಯನ್ನು ಪಾಲಿಸಬೇಕು" ಎಂದು ಹೇಳಿದ. ಯೊಹಾನ ಕ್ರಿಸ್ತನಿಗೆ ಸ್ನಾನ ದೀಕ್ಷೆಕೊಟ್ಟ.

ಯೊಹಾನದಿಂದ ಸ್ನಾನ ದೀಕ್ಷೆ ಪಡೆದ ಕ್ರಿಸ್ತ ಒಂದು ನಿರ್ಜನ ಪ್ರಶಾಂತ ಸ್ಥಳಕ್ಕೆ ಬಂದ. ಅಲ್ಲಿ ಏಕಾಂಗಿಯಾಗಿ ತಪ್ಪಸ್ಸಿಗೆ ಕುಳಿತ. ನಲವತ್ತು ದಿನಗಳ ಕಾಲ ಉಪವಾಸವಿದ್ದು ಧ್ಯಾನ ಮಾಡಿದ. ಧ್ಯಾನದ ಫಲವಾಗಿ ಕ್ರಿಸ್ತ ಗುರುವಾಗಲು ತಕ್ಕವನಾದ.

ಕ್ರಿಸ್ತನ ಶಿಷ್ಯರು

ಆಂದ್ರು ಮತ್ತು ಯೊಹಾನ ಕ್ರಿಸ್ತನ ಮೊದಲ ಶಿಷ್ಯರಾದರು. ಯೊಹಾನ ಕ್ರಿಸ್ತನ ಜೀವನ ಚರಿತ್ರೆಯನ್ನು ಬರೆದ. ಮೂರನೆಯವನು ಸಿಮೋನ. ಕ್ರಿಸ್ತ ಈತನಿಗೆ "ಪೀಟರ್" ಎಂದು ಹೆಸರಿಟ್ಟ."ಪೀಟರ್" ಎಂದರೆ "ಬಂಡೆ" ಎಂದು ಅರ್ಥ. ಈ ಪೀಟರನೇ ಕ್ರೈಸ್ತರ ಮೊತ್ತ ಮೊದಲ ಜಗದ್ಗುರು. ಆನಂತರ ಫಿಲಿಪ್, ನತಾನಿಯೇಲ್. ಹಿರಿಯ ಯಾಕೋಬ, ಸುಂಕದವನಾದ ಮತ್ತಾಯ ಶಿಷ್ಯರಾದರು. ಈ ಮತ್ತಾಯನೂ ಕ್ರಿಸ್ತನ ಜೀವನ ಚರಿತ್ರೆ ಬರೆದ. ತೋಮಸ್, ಕಿರಿಯ ಯಕೋಬ, ಸಿಮೋನ ಜೂದ ಮತ್ತು ಇಸ್ಕರಿಯದ ಜೂದ ಎಂದು ಹನ್ನೆರಡು ಜನ ಶಿಷ್ಯರಾದರು. ಇವರು ಸದಾ ಕ್ರಿಸ್ತನ ಜೊತೆಗೆ ಇರುತ್ತಿದ್ದರು. ಆತನ ಬೋಧನೆಗಳನ್ನು ಕೇಳುತ್ತಿದ್ದರು. ಮುಂದೆ ಕ್ರಿಸ್ತನ ನಂತರ ಇವರೇ ಕ್ರಿಸ್ತನ ಧರ್ಮವನ್ನು ಪ್ರಚಾರ ಮಾಡಿದರು. ಇವರನ್ನು "ಅಪೋಸ್ತಲರು"ಎಂದು ಕರೆಯುವುದೂ ಇದೆ.

ಪವಾಡಗಳು

ಕ್ರಿಸ್ತನ ಬಗೆಗೆ ಅನೇಕ ಕತೆಗಳಿವೆ. ಅವು ಪವಾಡಗಳಂತಿವೆ

ನಜರೇತಿನಿಂದ ಆರು ಮೈಲಿದೂರದಲ್ಲಿ ಕಾನಾ ಎಂಬ ಗ್ರಾಮ. ಇಲ್ಲಿ ಕ್ರಿಸ್ತನ ಸಂಬಂಧಿಕರ ಮದುವೆ ನಡೆಯುತ್ತಿತ್ತು. ಈ ಮದುವೆಗೆ ಕ್ರಿಸ್ತ ಬಂದಿದ್ದ. ಔತಣದ ಸಮಯದಲ್ಲಿ

ದ್ರಾಕ್ಷಾರಸ ಸಾಲದೆ ಬಂತು. ಕ್ರಿಸ್ತ ನೀರನ್ನು ದ್ರಾಕ್ಷಾರಸವನ್ನಾಗಿ ಮಾಡಿದ. ಮುಂದೆ ಆತ ಇನ್ನೂ ಅನೇಕ ಪವಾಡಗಳನ್ನು ಮೆರೆದ. ಕುಂಟರು ನಡೆಯುವಂತೆ, ಕುರುಡರು ನೋಡುವಂತೆ ಮಾಡಿದ. ಸತ್ತವರಿಗೆ ಜೀವ ಬರಿಸಿದ. ಪಿಶಾಚಿಗಳನ್ನು ಬಿಡಿಸಿದ. ಕುಷ್ಠರೋಗಿಗಳನ್ನು ಗುಣಪಡಿಸಿದ. ನೀರಿನ ಮೇಲೆ ನಡೆದ. ಹೀಗೆಲ್ಲಾ ಕತೆಗಳಿವೆ.

ಈ ಪವಾಡಗಳನ್ನು ಕ್ರಿಸ್ತ ಮೆರೆದನೋ ಇಲ್ಲವೋ ಆದರೆ ಅವನು ಕೀರ್ತಿವಂತನಾದದ್ದು ಈ ಪವಾಡಗಳಿಂದ ಅಲ್ಲ. ಆತನ ಬೋಧನೆಗಳು ಅವನನ್ನು ಮೇಲಕ್ಕೇರಿಸಿದವು. ಅವನು ತೋರಿದ ತ್ಯಾಗ ಹಾಗೂ ಪ್ರೀತಿ ಅವನನ್ನು ಜನಪ್ರಿಯನನ್ನಾಗಿ ಮಾಡಿತು- ಜನ ಆತನನ್ನು'ದೇವಕುಮಾರ' ಎಂದರು.

ಕ್ರಿಸ್ತನ ವ್ಯಕ್ತಿತ್ವದ ಬಗ್ಗೆ ಹೇಳುವುದು ತುಂಬಾ ಕಷ್ಟ. ಕ್ರಿಸ್ತ ಒಳ್ಳೆಯ ಮಾತುಗಾರ. ಕಂಡದ್ದನ್ನು ಕಂಡ ಹಾಗೆ ಹೇಳುತ್ತಿದ್ದ. ಜನರನ್ನು ವಿಚಾರಕ್ಕೆ ಹಚ್ಚುತ್ತಿದ್ದ. ಧರ್ಮದ ಬಗ್ಗೆ ಇದ್ದ ಮೂಢ ನಂಬಿಕೆಯನ್ನು ಬಿಡಿಸಿದ. ಸತ್ಯಕ್ಕೆ, ಧರ್ಮಕ್ಕೆ ಸಾವಿಲ್ಲವೆಂದು ಸಾರಿ ಹೇಳಿದ. ಅವನ ಹೃದಯ ಕರುಣೆಯ ಸಾಗರ. ಸಮಾಜದಲ್ಲಿ ಉಪೇಕ್ಷೆಗೆ ಒಳಗಾದವರನ್ನು ಕಂಡು ಮರುಗಿದ. ಪಾಪಿಗಳನ್ನೂ ಪ್ರೀತಿಸುತ್ತಿದ್ದ.

ಕ್ರಿಸ್ತನ ಬಗೆಗಿನ ಕೆಲವು ಕತೆಗಳು

ಒಂದು ದಿನ ಕ್ರಿಸ್ತ ಬಹಳ ದಣಿದು ಕುಳಿತಿದ್ದ. ಕೆಲವು ಹೆಂಗಸರು ತಮ್ಮ ಮಕ್ಕಳನ್ನು ಕರೆತಂದರು ಹರಸಬೇಕೆಂದು ಬೇಡಿದರು. ಕ್ರಿಸ್ತನ ಶಿಷ್ಯರು ಆ ಮಹಿಳೆಯರನ್ನು ಆತನ ಬಳಿಗೆ ಬಿಡಲಿಲ್ಲ. ಕ್ರಿಸ್ತ ತಾನೇ ಎದ್ದು ಬಂದ. ಮಕ್ಕಳನ್ನು ಹರಸಿದ. "ನಿಮ್ಮ ಮನಸ್ಸು ಮಕ್ಕಳಂತಾದರೆ, ನೀವು ಸ್ವರ್ಗಕ್ಕೆ ಹೋಗುವಿರಿ"ಎಂದ.

ಮತ್ತೊಂದು ಸನ್ನಿವೇಶ. ಕ್ರಿಸ್ತ ಒಂದು ಸಂಜೆ ಕಡಲ ತಡಿಯಲ್ಲಿ ಕುಳಿತಿದ್ದ. ತುಸುಬಾಗಿ, ಕೆನ್ನೆಗೈಯಾಗಿ ಲೋಕದ ಹಿತಕ್ಕೆ ಯೋಚಿಸುತ್ತ ಸೊರಗಿದ್ದ. ಕೆಲವು ಪರಿಸಾಯರು ಅಲ್ಲಿಗೆ ಬಂದರು. ಪರಿಸಾಯರು ಸಂಪ್ರದಾಯವಾದಿಗಳು. ಅವರು ಕ್ರಿಸ್ತನಿಗೆ ಅವಮಾನ ಮಾಡಲು ಸಮಯ ಕಾಯುತ್ತಿದ್ದರು. ಮಗ್ದಲ ಊರಿನ "ಮೇರಿ" ವೇಶ್ಯೆ. ಜಿಂಕೆಯನ್ನು

ಹುಲಿ ಎಳೆದು ತರುವಂತೆ ಆಕೆಯನ್ನು ಪರಿಸಾಯರು ಎಳೆದು ತಂದರು. ಕ್ರಿಸ್ತನ ಮುಂದೆ ನಿಲ್ಲಿಸಿದರು."ನೀನು ದೇವಪುತ್ರನಲ್ಲವೆ? ನ್ಯಾಯ ಅನ್ಯಾಯಗಳನ್ನು ಕುರಿತು ಮಾತಾಡುವೆಯಲ್ಲವೆ? ಈಕೆ ನಡತೆಗೆಟ್ಟವಳು. ಸಾಕ್ಷಿ ಸಮೇತ ಎಳೆತಂದಿದ್ದೇವೆ. ಈಗ ನ್ಯಾಯ ಹೇಳು" ಎಂದು ಒತ್ತಾಯಿಸಿದರು. ಕ್ರಿಸ್ತ ಪರಿಸಾಯರನ್ನು ನೋಡಿದ. ಮೇರಿಯನ್ನೂ ನೋಡಿದ. ಅವನ ಮನಸ್ಸು ಬೆಣ್ಣೆಯಂತೆ ಕರಗಿತು. "ನಿಮ್ಮಲ್ಲಿ ಇದುವರೆಗೆ ಯಾವ ತಪ್ಪೂ ಮಾಡದವನು ಈಕೆಗೆ ಕಲ್ಲು ಹೊಡೆಯಲಿ" ಎಂದ. ಪರಿಸಾಯರು ಮುಖ ಮುಖ ನೋಡಿಕೊಂಡರು. ಕ್ರಿಸ್ತ ತನ್ನ ಪಾಡಿಗೆ ಮರಳ ಮೇಲೆ ಏನೋ ಬರೆಯುತ್ತಿದ್ದ. ಆ ಗುಂಪು ಮೇರಿಯನ್ನು ಬಿಟ್ಟು ಹೊರಟು ಹೋಯಿತು ಮೇರಿ ಕಣ್ಣೀರಿಡುತ್ತ ನಿಂತಿದ್ದಳು. "ಇನ್ನು ಮುಂದೆ ಪಾಪ ಮಾಡಬೇಡ, ಹೋಗು"ಎಂದು ಕ್ರಿಸ್ತ ಅವಳನ್ನು ಕಳಿಸಿಕೊಟ್ಟ.

ಈ ಕತೆಗಳು ಕ್ರಿಸ್ತನ ಸ್ವಭಾವವನ್ನು ತೋರುವಂತವು. ಕ್ರಿಸ್ತ ತನ್ನ ಉಪದೇಶಗಳಲ್ಲಿ ಹೇಳಿದಂತೆ ನಡೆದು ತೋರಿಸಿದವನು. ಪ್ರೀತಿ, ಕ್ಷಮೆ, ತಪ್ಪು ಮಾಡಿದವರ ಬಗ್ಗೆ ದಯೆ ಇವೆಲ್ಲ ಅವನ ಜೀವನದ ಅಂಶಗಳು.

ಕ್ರಿಸ್ತನ ಜನಪ್ರಿಯತೆ ಕೆಲವರಿಗೆ ಹಿಡಿಸಲಿಲ್ಲ. ಅದರಲ್ಲೂ ಪುರೋಹಿತ ವರ್ಗ ಕೆಂಡಕಾರಿತು. ಪರಿಸಾಯರು ಆತನ ಮೇಲೆ ಮುಗಿಬಿದ್ದರು. ಕಂದಾಚಾರಿಗಳು ಆತನನ್ನು "ಪಾಷಂಡಿ" ಎಂದರು. ಧರ್ಮಬಾಹಿರ ವಿಚಾರ ಬೋಧಿಸುತ್ತಾನೆಂದು ದೂರಿದರು. ಕ್ರಾಂತಿಕಾರಿ ಎಂದರು."ದೇವಪುತ್ರನು ರಾಜನಲ್ಲಿ ಹುಟ್ಟುತ್ತಾನೆ. ಬಡಗಿ ಜೋಸೆಫನಲ್ಲಿ ಹುಟ್ಟುತ್ತಾನೆಯೇ?" ಎಂದು ಲೇವಡಿ ಮಾಡಿದರು.

ಪಾಸ್ಕ ಹಬ್ಬ

ಜುದೇಯದಲ್ಲೆಲ್ಲಾ ಬೋಧಿಸಿ ಕ್ರಿಸ್ತ ಜೆರುಸಲೇಮಿಗೆ ಬಂದ. "ಪಾಸ್ಕ" ಹಬ್ಬವನ್ನು ಅಲ್ಲೇ ಆಚರಿಸುವ ಆಸೆ ಇತ್ತು. ಶಿಷ್ಯರು "ನಿಮ್ಮನ್ನು ಕೊಲೆ ಮಾಡುವ ಸಂಚು ನಡೆದಿದೆ. ಬೇಡ"ಎಂದರು. ಕ್ರಿಸ್ತ ಶಿಷ್ಯರ ಮಾತಿಗೆ ಕಿವಿಗೊಡಲಿಲ್ಲ. "ದೇವರ ಚಿತ್ತದಂತೆ ನೆರವೇರಬೇಕು"ಎಂದು ಬಿಟ್ಟ. ಶಿಷ್ಯರಿಗೆ ಗುರು ಹೇಳಿದ ಮಾತಿನ ಅರ್ಥವಾಗಲಿಲ್ಲ.

ಕ್ರಿಸ್ತನ ಮೂವತ್ತ ಮೂರನೇ ವರ್ಷ. ಆಗ ವಸಂತಕಾಲ. ಪ್ಯಾಲೆಸ್ಟೈನದ ಬನಗಳೆಲ್ಲ ಹೂಗಳಿಂದ ತುಂಬಿದ್ದವು. ಪೈರು ಪಚ್ಚೆಗಳಿಂದ ತುಂಬಿದ ಬಯಲು. ಚಿಲಿಪಿಲಿಗುಟ್ಟುವ ಹಕ್ಕಿಗಳು. ಒಳ್ಳೆಯ ಸುಗ್ಗಿಗಾಗಿ ರೈತರು ಕಾದಿದ್ದರು.

ಪಾಸ್ಕದ ಪರ್ವದಿನಗಳು. ಜನ ಜೆರುಸಲೇಮಿನಲ್ಲಿ ಜಾತ್ರೆ ನೆರೆದರು. ಯೊಹೂದಿಗಳು ಹೆಚ್ಚಾಗಿ ಬಂದಿದ್ದರು. ಕೀರ್ತನೆ, ಭಜನೆ ಮೇಳಗಳು ನೆರೆದವು. ಮೇಳದ ಹಾಡು ಗಗನ ಮುಟ್ಟುತ್ತಿತ್ತು.

ಕ್ರಿಸ್ತ ಬರಬಹುದೆಂದು ಕೆಲವರು ಲೆಕ್ಕ ಹಾಕಿದ್ದರು. ಶನಿವಾರ ಕ್ರಿಸ್ತ ಬೆಥನಿ ಎಂಬಲ್ಲಿ ಬಂದು ತಂಗಿದ್ದ. ಭಾನುವಾರ ಆತ ಕತ್ತೆಯ ಮೇಲೆ ಜೆರುಸಲೇಮಿಗೆ ಹೊರಟ. ದಾರಿಯ ಉದ್ದಕ್ಕೂ ಜನ ಉತ್ಸಾಹದಿಂದ ಕುಣಿದರು. ಕೈಗೆಟುಕಿದ ಆಲಿವ್ ಮರದ ಕೊಂಬೆಗಳನ್ನು ಕಿತ್ತು ಹಿಡಿದರು. ಜೈಕಾರ ಮಾಡಿದರು. ಒಂದು ಮೆರವಣಿಗೆಯೇ ಆಯಿತು. ಮೆರವಣಿಗೆ ಹೆಬ್ಬಾಗಿಲ ಬಳಿ ಬಂತು."ದಾವೀದ ಕುಮಾರನಿಗೆ ಜಯವಾಗಲಿ! ದೇವರ ಹೆಸರಿನಲ್ಲಿ ಬರುವ ರಾಜನಿಗೆ ಜಯವಾಗಲಿ"ಎಂದು ಜನರು ಕೂಗಿದರು.

ಜೆರಸಲೇಮಿನ ಬೀದಿಯಲ್ಲಿ ಜನ ಸೇರಿದರು. "ಈತ ಯಾರಿರಬಹುದು?" ಎಂದು ಕೆಲವರು ಕೇಳಿದರು. "ನಜರೇತಿನ ಯೇಸು" ಎಂದರು ಕೆಲವರು. "ಪವಾಡ ಪುರುಷ" ಎಂದರು ಮತ್ತೆ ಕೆಲವರು. ಇನ್ನು ಕೆಲವರು "ಮಹಾತ್ಮ" ಎಂದರು. ಅವರೂ ಗುಂಪು ಸೇರಿದರು. ಜಯಘೋಷ ಹೆಚ್ಚಾಯಿತು.

ಕ್ರಿಸ್ತನ ಮೆರವಣಿಗೆಯ ಪ್ರವೇಶ ಕಂಡು ಆತನ ವೈರಿಗಳು ಸಹಿಸದಾದರು. ಕಳ್ಳನಂತೆ ಕಣ್ಣು ತಪ್ಪಿಸಿ ಬರುತ್ತಾನೆ ಎಂದುಕೊಂಡಿದ್ದರು. ಅವರ ಅನಿಸಿಕೆ ಹುಸಿಯಾಯಿತು ರಾಜಾರೋಷವಾಗಿ ಬಂದಿದ್ದ ಕ್ರಿಸ್ತ. ಆತನ ವಿರೋಧಿಗಳಿಗೆ ಇದು ನುಂಗಲಾಗದ ತುತ್ತಾಯಿತು. ಹೊಟ್ಟೆಕಿಚ್ಚಿನಿಂದ ಕುದಿದರು. "ನಿನ್ನ ಜಯಘೋಷ ನಿಲ್ಲುವಂತೆ ಹೇಳು"ಎಂದು ಗದರಿದರು."ಅವರು ಸುಮ್ಮನಾದರೂ ದಾರಿಯ ಬದಿಯ ಕಲ್ಲುಗಳು ಜೈಕಾರ ಮಾಡುತ್ತವೆ" ಎಂದು ಕ್ರಿಸ್ತ ಮುಗುಳ್ನಕ್ಕ. ಆತನ ವೈರಿಗಳಿಗೆ ಹೇಗಾಗಿರಬೇಕು? ಅಂದೇ ರಾತ್ರಿ ಕ್ರಿಸ್ತ ತಾನು ತಂಗಿದ್ದ

ಬೆಥನಿ ಗ್ರಾಮಕ್ಕೆ ವಾಪಸ್ಸು ಹೋದ. ಸೋಮವಾರ ಬೆಳಿಗ್ಗೆ ಮತ್ತೆ ಜೆರುಸಲೇಮಿಗೆ ಬಂದ. ದೇವಾಲಯದಲ್ಲಿ ಬೋಧಿಸಿದ. ಯೊಹೂದ್ಯರು ಮತ್ತು ಪರಿಸಾಯರು ಆತನ ಬೋಧನೆ ಕೇಳಿ ಕೋಪಗೊಂಡರು. ಅಂದು ರಾತ್ರಿ ಕ್ರಿಸ್ತ ಸಮೀಪದ ಬೆಟ್ಟಕ್ಕೆ ಹೋದ. ರಾತ್ರಿಯನ್ನು ಪ್ರಾರ್ಥನೆಯಲ್ಲಿ ಕಳೆದ. ಮಂಗಳವಾರ ಬೆಳಿಗ್ಗೆ ತಿರುಗಿ ದೇವಾಲಯಕ್ಕ ಬಂದ. ದೇವಾಲಯದ ಒಳಾಂಗಣದಲ್ಲಿ ಕುಳಿತ. ಜನ ನಾನಾ ಕಡೆಯಿಂದ ಇರುವೆಗಳಂತೆ ಬರುತ್ತಿದ್ದರು. ತಮ್ಮ ಕಾಣಿಕೆಗಳನ್ನು ಹುಂಡಿಗೆ ಸುರಿಯುತ್ತಿದ್ದರು.

ಬಡವಳ ಭಕ್ತಿ

ಆ ಜನರ ಒಬ್ಬ ಬಡ ಮದುಕಿ ಕಾಣಿಸಿಕೊಂಡಳು. ಮೆಲ್ಲಗೆ ದೇವಾಲಯಕ್ಕೆ ಬಂದಳು. ಚೀಲದಿಂದ ಒಂದಿಷ್ಟು ಚಿಲ್ಲರೆ ತೆಗೆದಳು. ಅದನ್ನು ಯಾರೂ ಕಾಣದಂತೆ ಹುಂಡಿಗೆ ಹಾಕಿದಳು. ದೇವರಿಗೆ ವಂದಿಸಿ ಹೊರಟು ಹೋದಳು.



ಬಡವಿಯ ಕಾಣಿಕೆ

ಕ್ರಿಸ್ತ ಅದನ್ನು ನೋಡಿ ಭಾವ ತುಂಬಿದವನಾದ. "ಆ ಬಡವಿಯ ಕಾಣಿಕೆ ಶ್ರೀಮಂತರ ಕಾಣಿಕೆಗಿಂತ ಮೇಲು. ಶ್ರೀಮಂತರು ತಮ್ಮಲ್ಲಿ ಇರುವ ಧನರಾಶಿಯ ಒಂದಂಶವನ್ನು ಕೊಡುವರು. ಈ ಮುದುಕಿ ತನ್ನ ಬಡತನವನ್ನೇ ಕೊಟ್ಟುಬಿಟ್ಟಳು." ಎಂದ ಕ್ರಿಸ್ತ.

ಹಿಂದಿನ ಸಂಜೆ ಕ್ರಿಸ್ತನ ವೈರಿಗಳು ಸಭೆ ಸೇರಿದ್ದರು. ಆತನನ್ನು ಹಿಡಿಯಲು ತೀರ್ಮಾನಿಸಿದ್ದರು. ಸುಳ್ಳು ಸಾಕ್ಷಿಗಳನ್ನು ಹುಟ್ಟು ಹಾಕಿದ್ದರು. ಕ್ರಿಸ್ತನನ್ನು ಮುತ್ತಿದರು. ಆತನ ಮೇಲೆ ಪ್ರಶ್ನೆಗಳ ಮಳೆ ಸುರಿದರು. ಕ್ರಿಸ್ತ ಅವರ ಪ್ರಶ್ನೆಗಳಿಗೆ ನೇರವಾಗಿ ಉತ್ತರಿಸಿದ. ಆವರ ಮಧ್ಯ ಮಾತಿನ ಯುದ್ಧವೇ ನಡೆಯಿತು. ಆದರೆ ಅಂದು ಅವರು ಕ್ರಿಸ್ತನನ್ನು ಬಂಧಿಸಲು ಆಗಲಿಲ್ಲ.

ಬುಧವಾರ ರಾತ್ರಿ ಕ್ರಿಸ್ತನ ವೈರಿಗಳು ಸಭೆ ಸೇರಿದರು. ಕ್ರಿಸ್ತನನ್ನು ಬಹಿರಂಗವಾಗಿ ಬಂಧಿಸುವುದು ಆಪಾಯ ಎಂದು ತಿಳಿದರು. ಗುಟ್ಟಾಗಿ ಬಂಧಿಸಲು ತೀರ್ಮಾನಿಸಿದರು. ಆತನನ್ನು ಹಿಡಿದು ಕೊಡಲು ಆತನ ಶಿಷ್ಯನನ್ನೇ ಒಪ್ಪಿಸಿದರು. ಜೂದಾಸ್ ಇಸ್ಕಾರಿಯೇತ್ ಮೂವತ್ತು ಬೆಳ್ಳಿ ನಾಣ್ಯಗಳಿಗೆ ಈ ಕೆಲಸ ಮಾಡಲು ಒಪ್ಪಿಬಿಟ್ಟ.

ಪಾಸ್ಕ ಭೋಜನ

ಗುರುವಾರದ ರಾತ್ರಿ "ಪಾಸ್ಕ"ದ ಊಟವಾಗಬೇಕಿತ್ತು. ಪಾಸ್ಕ ಭೋಜನ ವಿಶೇಷವಾದುದು. ಹುಳಿ ಇಲ್ಲದ ರೊಟ್ಟಿ. ಯಾವುದೇ ಅಂಗಹೀನವಿಲ್ಲದ ಒಂದು ವರ್ಷದ ಟಗರು. ಅದನ್ನು ಇಡಿಯಾಗಿ ಕೆಂಡದಲ್ಲಿ ಸುಡಬೇಕು. ಕಹಿ ಗಿಡಮೂಲಿಕೆಗಳು. ಹರೊಸೆತ್ ಎಂಬ ಹಣ್ಣಿನ ರಸ. ಖರ್ಜೂರ, ದ್ರಾಕ್ಷಿಗೆ ಹುಳಿರಸ ಸೇರಿಸಬೇಕು. ಇದೇ ಪಾಸ್ಕದ ಭೋಜನ. ಭೋಜನ ಸಿದ್ಧವಾಯಿತು. ಹತ್ತು ಮಂದಿ, ಹೆಚ್ಚೆಂದರೆ ಇಪ್ಪತ್ತು ಮಂದಿ ಈ ಭೋಜನ ಮಾಡಬಹುದಿತ್ತು

ಕ್ರಿಸ್ತನ ಹನ್ನೆರಡು ಜನ ಶಿಷ್ಯರೂ ಊಟಕ್ಕೆ ಕುಳಿತರು. ಭೋಜನಕ್ಕೆ ಮೊದಲು ಕ್ರಿಸ್ತ ತನ್ನ ಶಿಷ್ಯರ ಪಾದಗಳನ್ನು ತೊಳೆದ. ಎಲ್ಲರೂ ಸಮಾನರು. ಅವರವರ ಸ್ಥಾನದಲ್ಲಿ ಅವರನ್ನು ಗೌರವಿಸಬೇಕು. ಇದನ್ನು ಜಗತ್ತಿಗೆ ತೋರಿಸಲೆಂದೇ ಕ್ರಿಸ್ತ ಹೀಗೆ ಮಾಡಿದ್ದು.



ಕೊನೆಯ ಭೋಜನ

ಕೊನೆಯ ಭೋಜನ

ಗುರುವಿನ ಸುತ್ತ ಶಿಷ್ಯರು ಕುಳಿತುಕೊಂಡರು. ವಿಧಿವತ್ತಾಗಿ ಪಾಸ್ಕದ ಊಟ ಮಾಡಿದರು. ಯಜಮಾನನ ಸ್ಥಾನ ಕ್ರಿಸ್ತನದು. ಆತ ಹುಳಿ ಇರದ ರೊಟ್ಟಿ ಮುರಿದು ಕೊಟ್ಟ. "ಇದು ನನ್ನ ಶರೀರ" ಎಂದ. ಹುಳಿರಸ ಕೊಡುತ್ತ. "ಇದು ನನ್ನ ರಕ್ತ" ಎಂದ "ಈ ವಿಧಿಯನ್ನು ನನ್ನ ನೆನಪಿಗಾಗಿ ಮಾಡಿ" ಎಂದ. ಅದೇ ಕ್ರಿಸ್ತನ "ಕೊನೆಯ ಭೋಜನ" ಇದರ ನೆನಪಿಗಾಗಿಯೇ ಕ್ರೈಸ್ತರು ಪ್ರತಿದಿನ ಪೂಜೆ ಮಾಡುತ್ತಾರೆ.

ತನ್ನನ್ನು ಹಿಡಿದು ಕೊಡುವ ಸಂಚಿನ ಬಗೆಗೆ ಕ್ರಿಸ್ತನಿಗೆ ತಿಳಿದಿತ್ತು.

ಊಟದ ಮಧ್ಯೆ ಈ ಬಗ್ಗೆ ಸೂಚಿಸಿದ. ಶಿಷ್ಯರು ಮಿಕಿ ಮಿಕಿ ನೋಡುತ್ತಿದ್ದರು. ಜುದಾಸ್ ಮೆಲ್ಲಗೆ ಅಲ್ಲಿಂದ ಎದ್ದು ಹೋದ.

ಊಟವಾದ ಮೇಲೆ ಕೆಲಕಾಲ ಮಾತಾಡುವುದು ರೂಢಿ. ಕ್ರಿಸ್ತ ಶಿಷ್ಯರಿಗೆ ಬುದ್ಧಿವಾದ ಹೇಳಿದ. ತನ್ನ ಅಂತಿಮ ಗಳಿಗೆ ಸಮೀಪಿಸಿತೆಂದು ಸೂಕ್ಷ್ಮವಾಗಿ ತಿಳಿಸಿದ. "ನಾನು ಬೇಗನೆ ನಿಮ್ಮನ್ನು ಅಗಲಲಿದ್ದೇನೆ. ಭೂಲೋಕವನ್ನು ತ್ಯಜಿಸಲಿದ್ದೇನೆ. ತಂದೆಯ ಬಳಿಗೆ ಹೋಗುವವನಿದ್ದೇನೆ. ಆಗ ನೀವು ನನ್ನ ಮಹಿಮೆಯನ್ನು ಕಾಣುವಿರಿ. ಆ ಮಹಿಮೆ ದೇವಪುತ್ರನದು ಎಂದು ನಿಮಗೆ ಆಗ ತಿಳಿಯುವುದು" ಎಂದ.

ಕೊನೆಯಲ್ಲಿ ಕ್ರಿಸ್ತ ಹೀಗೆ ಪ್ರಾರ್ಥಿಸಿದ. "ತಂದೆಯೇ ನನ್ನ ಸಮಯ ಬಂತು. ನೀವು ನನಗೆ ಹೊರಿಸಿದ್ದ ಜವಾಬ್ದಾರಿಯನ್ನು ಮಾಡಿ ಮುಗಿಸಿದ್ದೇನೆ. ನನ್ನಲ್ಲಿಗೆ ಬಂದ ಈ ಸಜ್ಜನರಿಗಾಗಿ ಬೇಡಿದ್ದೇನೆ. ಈ ಲೋಕದಲ್ಲಿ ನಾನಿನ್ನು ನಿಲ್ಲುವುದಿಲ್ಲ. ಆದರೆ ಈ ಜನರು ನಿಲ್ಲುತಾರೆ. ಇವರನ್ನು ಕಾಪಾಡುವ ಭಾರ ನಿನ್ನದು. ಇವರ ಆನಂದ ಅನಂತವಾಗಲಿ. ಪೂರ್ಣವಾಗಲಿ. ಜನರು ಒಂದಾಗಿ ಬಾಳಲಿ..." ಕ್ರಿಸ್ತ ಕರುಣೆ ತುಂಬಿ ಪ್ರಾರ್ಥಿಸಿದ.

ಜೆತ್ಸೆಮನಿ ತೋಟದಲ್ಲಿ

ಆದಾಗಾಲೇ ತುಂಬಾ ಕತ್ತಲಾಗಿತ್ತು. ಶಿಷ್ಯರು ತೂಕಡಿಸುತ್ತಿದ್ದರು. ಅಂದು ವಸಂತ ಹುಣ್ಣಿಮೆಯ ರಾತ್ರಿ. ಚಂದ್ರನ ಬೆಳದಿಂಗಳು ಭೂಮಿಯ ಮೇಲೆ ಹಾಲು ಚೆಲ್ಲಿದಂತೆ

ಇತ್ತು. ಗುರು-ಶಿಷ್ಯರು ಕೆದ್ರೋನ್ ಹೊಳೆ ದಾಟಿ ಒಲಿವ್ ಬೆಟ್ಟಕ್ಕೆ ಬಂದರು. ಅದರ ತಪ್ಪಲಲ್ಲೇ"ಜೆತ್ಸೆಮನಿ" ತೋಟವಿತ್ತು. "ಜೆತ್ಸೆಮನಿ" ಎಂದರೆ "ಎಣ್ಣೆಯಗಾಣ" ಎಂದು ಅರ್ಥ. ಅಲ್ಲಿ ಗಾಣದಿಂದ ಒಲಿವ್ ಎಣ್ಣೆ ತೆಗೆಯುತ್ತಿದ್ದರು. ಅಲ್ಲಿ ಕ್ರಿಸ್ತ ಶಿಷ್ಯರಿಂದ ದೂರ ಹೋಗಿ ಒಂಟಿಯಾಗಿ ಕೂಡಲು ಬಯಸಿದ. ಆದಾಗಲೇ ಆತನ ಮುಖ ಕಪ್ಪಿಟ್ಟಿತ್ತು. ಹಣೆಯ ಮೇಲೆ ಬೆವರ ಹನಿಗಳು ಮೂಡಿದವು. ಭಯ, ಆತಂಕ, ದುಃಖ ದುಗುಡ ಎದ್ದು ಕಂಡಿತು. ಶಿಷ್ಯರಿಗೆ ಪ್ರಾರ್ಥಿಸಲು ಹೇಳಿದ. ಕ್ರಿಸ್ತ ಸ್ವಲ್ಪ ದೂರಕ್ಕೆ ಹೋಗಿ ಪ್ರಾರ್ಥಿಸಿದ. ಆತನ ಮೈಮೇಲೆ ರಕ್ತದ ಬೆವರು ಕಾಣಿಸಿತು. "ತಂದೆಯೇ ಸಾಧ್ಯವಾದರೆ ಈ ವಿಷಮ ಗಳಿಗೆಯು ನನ್ನಿಂದ ದೂರವಾಗಲಿ. ನಿನಗೆ ಎಲ್ಲಾ ಸಾಧ್ಯ. ನಿನ್ನ ಇಷ್ಟದಂತೆ ಮಾಡು" ಎಂದು ಬೇಡಿಕೊಂಡ.

ಕ್ರಿಸ್ತನ ಬಂಧನ

ಪ್ರಾರ್ಥನೆಯ ಮಧ್ಯೆ ಶಿಷ್ಯರ ಬಳಿಗೆ ಮೂರು ಸಾರಿ ಬಂದು ಹೋದ. ಮೂರನೆಯ ಸಾರಿ ಬಂದಾಗ ಜೂದಾಸ್ ಇಸ್ಕಾರಿಯೇತ್ ಗುರುವಿಗೆ ಮುತ್ತಿಟ್ಟ. ಇದು ವೈರಿಗಳಿಗೆ ಜೂದಾಸನು ಕೊಟ್ಟ ಸೂಚನೆಯಾಗಿತ್ತು. ಕ್ರಿಸ್ತನ ವೈರಿಗಳು ಆತನನ್ನು ಇರುವೆಯಂತೆ ಮುತ್ತಿದರು. ಆತನನ್ನು ಬಂಧಿಸಿ ಎಳೆದೊಯ್ದರು.

ಕ್ರಿಸ್ತನ ಬಂಧನದಿಂದ ಆತನ ಶಿಷ್ಯರು ಚದುರಿದರು. ಅವರಲ್ಲಿ ಪೀಟರ್ ಗುರುವನ್ನು ಅರಿಯೆನೆಂದು ಮೂರು ಸಾರಿ ಹೇಳಿದ. ಆತನೂ ಮನುಷ್ಯನಲ್ಲವೆ? ಮನುಷ್ಯ ಸಹಜ ದೌರ್ಬಲ್ಯ ಆತನಲ್ಲೂ ಇತ್ತು. ಅದಕ್ಕಾಗಿ ಪೀಟರ್ ಪಶ್ಚಾತ್ತಾಪ ಪಟ್ಟ. ಮುಂದೆ ಕ್ರೈಸ್ತ"ಧರ್ಮಸಭೆ"ಯನ್ನು ಆತನೇ ನಡೆಸಿದ. "ಧರ್ಮಸಭೆ" ಎಂದರೆ "ಕ್ರೈಸ್ತರ ಒಕ್ಕೂಟ." ಗುರುವನ್ನು ಮಾರಿದ ಪಾಪಕ್ಕೆ ಜೂದಾಸ್ ನೊಂದುಕೊಂಡ. ತಾನು ಪಡೆದ ಮುವತ್ತು ನಾಣ್ಯಗಳನ್ನು ಅವರಿಗೆ ಕೊಡಲು ಹೋದ. ಅವರು ಅದನ್ನು ತೆಗೆದುಕೊಳ್ಳಲಿಲ್ಲ. ನಾಣ್ಯಗಳನ್ನು ದೇವಾಲಯದಲ್ಲಿ ಚೆಲ್ಲಿದ. ಜೂದಾಸ್ ನೇಣು ಹಾಕಿಕೊಂಡು ಸತ್ತ.

ಕ್ರಿಸ್ತನನ್ನು ಮೊದಲು "ಆನ್ನಾ" ಎಂಬುವನ ಬಳಿಗೆ ಎಳೆ ತಂದರು. ಆನ್ನಾ ಶ್ರೀಮಂತ ನಿವೃತ್ತ ಪೂಜಾರಿ. ಚರಿತ್ರೆಯಲ್ಲಿ ಈತನ ಹೆಸರು ಕುಖ್ಯಾತ. ಈತ ಕ್ರಿಸ್ತನನ್ನು ವಿಚಾರಣೆ ಮಾಡಿದ. ಸೇವಕರಿಂದ ಅವನಿಗೆ ಹೊಡೆಸಿದ.

ಕ್ರಿಸ್ತನ ವಿಚಾರಣೆ

ಕಾಯಫ ಆಗಿನ ಪ್ರಧಾನ ಪೂಜಾರಿ. ಆತ "ಸಾನದ್ರಿನ್" ಸಭೆ ಕರೆದಿದ್ದ. "ಸಾನದ್ರಿನ್" ಎಂಬುದು ಯೆಹೂದ್ಯರ ನ್ಯಾಯಾಲಯ.

ವಿಚಾರಣೆ ನಡೆದದ್ದು ನಡುರಾತ್ರಿಯಲ್ಲಿ. ಯಹೂದ್ಯರ ಪ್ರಕಾರ ಇದು ನ್ಯಾಯವಲ್ಲ. ಇಷ್ಟೇ ಅಲ್ಲದೆ, ನ್ಯಾಯಾಲಯವು ಸುಳ್ಳು ಸಾಕ್ಷಿ ರೂಪಿಸಿತು. ದೋಷಾರೋಪ ಮಾಡಿತು. ಅಲ್ಲಿ ಕೆಲವರು ಆತನ ಮುಖಕ್ಕೆ ಉಗುಳಿದರು. ಕೆಲವರು ಗುದ್ದಿದರು. ಕೆಲವರು ಕೆನ್ನೆಗೆ ಬಾರಿಸಿದರು."ಆತನಿಗೆ ಮರಣದಂಡನೆಯಾಗಲಿ" ಎಂದು ಕೂಗಾಡಿದರು. ಮರುದಿನ ಶುಕ್ರವಾರ. ಅಂದು ಬೆಳಿಗ್ಗೆ ಕ್ರಿಸ್ತನನ್ನು ಪಿಲಾತನ ಬಳಿಗೆ ಕರೆತಂದರು. ಪಿಲಾತ ಆಗಿನ ರಾಜ್ಯಪಾಲ. ಜಾತ್ರೆಯ ಉಸ್ತುವಾರಿ ನೋಡಿಕೊಳ್ಳಲು ಬಂದಿದ್ದ. ಆತನಿಗೆ ಯೆಹೂದ್ಯರನ್ನು ಕಂಡರೆ ಆಗುತ್ತಿರಲಿಲ್ಲ. ಯೆಹೂದ್ಯರು ಕ್ರಿಸ್ತನನ್ನು ಎಳೆತಂದಿದ್ದರು. ಮರಣ ದಂಡನೆ ಆಗಬೇಕೆಂದು ಕೂಗುತ್ತಿದ್ದರು. ಪಿಲಾತ ಕ್ರಿಸ್ತನನ್ನು ವಿಚಾರಿಸಿದ. ಪಿಲಾತನಿಗೆ ಆತನಲ್ಲಿ ಯಾವ ದೋಷವೂ ಕಾಣಲಿಲ್ಲ. ಕ್ರಿಸ್ತ ಗಲಿಲೇಯದವನೆಂದು ತಿಳಿಯಿತು. ಪಿಲಾತನಿಗೆ ಹೆರೋದನ ನೆನಪು ಬಂತು. "ಕ್ರಿಸ್ತ ಹೆರೋದನ ಅಧಿಪತ್ಯಕ್ಕೆ ಒಳಪಟ್ಟವನು. ಆತನೇ ವಿಚಾರಣೆ ನಡೆಸಲಿ" ಎಂದು ಆತನಲ್ಲಿಗೆ ಕಳಿಸಿಕೊಟ್ಟ.

ಹೆರೋದ ದುಷ್ಟ ರಾಜ ಎಂದು ಓದಿದ್ದೇವೆ. ಈತ ಸಾಮಂತ ರಾಜ. ಕ್ರಿಸ್ತನ ಬೋಧನೆಗಳ ವಿಚಾರ ಕೇಳಿದ್ದ. ಆತನೂ ಜೆರುಸಲೇಮಿನಲ್ಲಿ ತಂಗಿದ್ದ. ಕ್ರಿಸ್ತನನ್ನು ಎಳೆತಂದು ಹೆರೋದನ ಮುಂದೆ ನಿಲ್ಲಿಸಿದರು.

ಹೆರೋದನ ಯಾವ ಪ್ರಶ್ನೆಗೂ ಕ್ರಿಸ್ತ ಉತ್ತರಿಸಲಿಲ್ಲ. ದುಷ್ಟನ ಮುಂದೆ ಮಾತಾಡುವುದರಿಂದ ಲಾಭವಿಲ್ಲವೆಂದು ಕ್ರಿಸ್ತನಿಗೆ ತಿಳಿದಿತ್ತು. ಹೆರೋದನಿಗೆ ಕ್ರಿಸ್ತನ ಮೇಲೆ ಸಿಟ್ಟು ಬಂತು. ಕ್ರೋಧದಿಂದ 'ಕ್ರಿಸ್ತನು ಹುಚ್ಚ' ಎಂದು ಸಾರಿದ. ಅಣಕ ಮಾಡಿದ. ಅವಮಾನ ಪಡಿಸಿದ. ಹುಚ್ಚನಿಗೆ ತಕ್ಕ ವೇಷ ತೊಡಿಸಲು ಹೇಳಿದ. ರಾಜ ವಸ್ತ್ರವನ್ನು ಉಡಿಸಿ, ಅದನ್ನು ಚಿಂದಿಯಾಗಿ ಹರಿಸಿದ. ಪಿಲಾತನ ಬಳಿಗೆ ಮರಳಿ ಕಳಿಸಿದ.

ಕ್ರಿಸ್ತನಿಗೆ ಶಿಕ್ಷೆ



ಕ್ರಿಸ್ತನಿಗೆ ಪಿಲಾತ ಶಿಕ್ಷೆ ವಿಧಿಸುವುದು

ಪಿಲಾತನಿಗೆ ಮಾತ್ರ ಮರಣ ಶಿಕ್ಷೆ ಕೊಡುವ ಅಧಿಕಾರವಿತ್ತು. ಕ್ರಿಸ್ತ ಯಾವ ತಪ್ಪು ಮಾಡಿಲ್ಲವೆಂದು ಪಿಲಾತನಿಗೆ ತಿಳಿದಿತ್ತು. ತಪ್ಪು ಮಾಡದವನಿಗೆ ಆತ ಶಿಕ್ಷೆ ಕೊಡಬೇಕಾಗಿತ್ತು. ಅದು ಅಧರ್ಮ. ಅದಕ್ಕಾಗಿ ಆತ ಜವಾಬ್ದಾರಿಯಿಂದ ನುಣುಚಿಕೊಳ್ಳಲು ನೋಡಿದ. ಕ್ರಿಸ್ತನ ಪರವಾಗಿ ತೀರ್ಪು ನೀಡುವಂತಿಲ್ಲ. ಏಕೆಂದರೆ ಯೆಹೂದ್ಯರು ಎದುರು ಬೀಳುವರು. ಅವರು ಚಕ್ರವರ್ತಿಗೆ ದೂರಿಟ್ಟರೆ ಕೆಲಸವೂ ಹೋಗುತ್ತದೆ ಎಂಬ ಭಯ. ಪಿಲಾತ ಒಂದು ಉಪಾಯ ಮಾಡಿದ. ಹಬ್ಬದ ದಿನ ಒಬ್ಬ ಅಪರಾಧಿಯನ್ನು ಆತ ಬಿಡುಗಡೆ ಮಾಡಬಹುದಿತ್ತು. ಬರಬ್ಬಸ್ ಎಂಬ ಕೈದಿಯನ್ನು ಬಿಡುಗಡೆ ಮಾಡಬೇಕಿತ್ತು. ಆತನ ಬದಲು ಕ್ರಿಸ್ತನನ್ನು ಬಿಡುಗಡೆ ಮಾಡುವುದಾಗಿ ಹೇಳಿದ. ಆದರೆ ಜನ ಒಪ್ಪಲಿಲ್ಲ. ಕ್ರಿಸ್ತನನ್ನು ಶಿಲುಬೆಗೇರಿಸುವಂತೆ ಕೂಗಾಡಿದರು. ಬರಬ್ಬಸನನ್ನೇ ಬಿಡುಗಡೆ ಮಾಡುವಂತೆ ಕೇಳಿಕೊಂಡರು. ಪಿಲಾತ ಬಟ್ಟಲಲ್ಲಿ ನೀರು ತರಿಸಿದ. ನಿರಪರಾಧಿಯ

ರಕ್ತಕ್ಕೆ ತಾನು ಕಾರಣವಲ್ಲವೆಂದು ಕೈತೊಳೆದುಕೊಂಡ. ಕೊನೆಯಲ್ಲಿ ಚಾಟಿಯೇಟು ಹೊಡೆಯಲು ಅಪ್ಪಣೆ ಕೊಟ್ಟ.

ಕೊರಡೆಯ ಏಟು

ರೋಮನರು ಗುಲಾಮರಿಗೆ ಕೊಡುತ್ತಿದ್ದ ಶಿಕ್ಷೆ ಕೊರಡೆಯೇಟು. ಅದರ ಹೆಸರು ಕೇಳಿದರೆ ಅಪರಾಧಿಗಳು ನಡುಗುತ್ತಿದ್ದರು. "ಕೊರಡೆ" ಎಂದರೆ ಒಂದು ಚರ್ಮದ ಚಾವಟಿ. ಅದಕ್ಕೆ ಚೂಪಾದ ಮೊಳೆಗಳನ್ನು ಸಿಕ್ಕಿಸುತ್ತಿದ್ದರು. ಇನ್ನೊಂದು ಲೋಹದ ಚಾವಟಿ. ಅದರ ತುದಿಗೆ ಲೋಹದ ಚೂಪಾದ ಚೂರುಗಳನ್ನು ಪೋಣಿಸಿರುತ್ತಿದ್ದರು.

ಕ್ರಿಸ್ತನಿಗೆ ಇಂಥ ಕೊರಡೆಯ ಏಟಿನ ಶಿಕ್ಷೆಯಾಯಿತು. ಆತನನ್ನು ಕಂಬಕ್ಕೆ ಕಟ್ಟಿದರು. ತುದಿಬೆರಳ ಮೇಲೆ ನಿಲ್ಲಿಸಿದರು. ಆತನ ಬಟ್ಟೆ ಬಿಚ್ಚಿದರು. ಕೊರಡೆಯಿಂದ ಹೊಡೆದರು. ಆತನ ದೇಹದಿಂದ ಮಾಂಸ ಕಿತ್ತು ಬರುತ್ತಿತ್ತು. ರಕ್ತದ ಓಕುಳಿಯಾಗುತಿತ್ತು. ಯೆಹೂದ್ಯರ ಪ್ರಕಾರ ನಲವತ್ತಕ್ಕಿಂತ ಹೆಚ್ಚು ಏಟು ಕೊಡುವಂತಿರಲಿಲ್ಲ. ರೋಮನರಂತೆ ಅರವತ್ತಾರು ಏಟುಗಳನ್ನು ಕೊಡಲು ಅವಕಾಶವಿತ್ತು. ಆದರೆ ಕ್ರಿಸ್ತನಿಗೆ ಇವೆರಡನ್ನೂ ಮೀರಿದಷ್ಟು ಏಟು ಕೊಟ್ಟರು.

ಕೆಲವರು ಇಷ್ಟರಿಂದ ತೃಪ್ತರಾಗಲಿಲ್ಲ. ಮುಳ್ಳಿನಿಂದ ಕಿರೀಟ ಮಾಡಿಸಿ ತಂದರು. ಅದನ್ನು ಕ್ರಿಸ್ತನ ತಲೆ ಮೇಲಿಟ್ಟು ಹೊಡೆದರು. ಕೆನ್ನೇರಳೆ ಬಣ್ಣದ ಅಂಗಿಯನ್ನು ಉಡಿಸಿದರು. ರಾಜ ದಂಡವಾಗಿ ಬಿದುರು ಕೋಲನ್ನು ಕೈಗೆ ಕೊಟ್ಟರು. "ಯೆಹೂದ್ಯರ ಅರಸ" ಎಂದು ಪರಿಹಾಸ್ಯ ಮಾಡಿದರು. ಎಂಥ ಕರುಳು ಕಿತ್ತು ಬರುವ ಶಿಕ್ಷೆ! ದೇಹವೆಲ್ಲಾ ಜಜ್ಜಿ ಹೋಗಿತ್ತು. ನಿತ್ರಾಣವಾಗಿತ್ತು. ನೀರಡಿಕೆಯಾಗಿತ್ತು. ಸೈನಿಕರು ಕ್ರಿಸ್ತನನ್ನು ಅವಮಾನ ಮಾಡುತ್ತಿದ್ದರು. ಆಗ ಪಿಲಾತ ಮೊಗಸಾಲೆಗೆ ಬಂದ. ಜನರು ಕ್ರಿಸ್ತನಿಗೆ ಶಿಲುಬೆ ಶಿಕ್ಷೆ ವಿಧಿಸುವಂತೆ ಕೂಗುತ್ತಿದ್ದರು. ಪಿಲಾತ ಜನರ ಕೂಗಿಗೆ ಹೆದರಿದ. ಕೊನೆಯಲ್ಲಿ "ಶಿಲುಬೆಯ ಶಿಕ್ಷೆ" ವಿಧಿಸಿದ.

ಈ ಶಿಕ್ಷೆ ವಿಧಿಸಿದಾಗ ಸುಮಾರು ಹನ್ನೊಂದು ಗಂಟೆ. ಉರಿಯುವ ಸುಡುಬಿಸಿಲು. ಕ್ರಿಸ್ತನ ಮೇಲೆ ಶಿಲುಬೆ ಹೊರಿಸಿದರು. ಉದ್ದಕ್ಕೆ ಮತ್ತು ಅಡ್ಡಕ್ಕೆ ಇಟ್ಟು ಕಟ್ಟಿದ ದಿಮ್ಮಿಯ ಮರಕ್ಕೆ ಶಿಲುಬೆ ಎನ್ನುವರು. ಅದು ಬಹಳ ಭಾರವಾದದ್ದು. ಹೊರಲು ಕಷ್ಟವಾದದ್ದು.

ಕ್ರಿಸ್ತನನ್ನು ಶಿಲುಬೆಗೇರಿಸಿದ್ದು "ಗೊಲ್ಗೊಥ" ಗುಡ್ಡದಲ್ಲಿ. "ಗೊಲ್ಗೊಥ" ಎಂದರೆ "ತಲೆಬುರುಡೆಗಳ ಸ್ಥಳ" ಎಂದು ಅರ್ಥ. ಇಲ್ಲಿಗೆ ಕ್ರಿಸ್ತ ತನ್ನ ಶಿಲುಬೆಯನ್ನು ಹೊತ್ತುಕೊಂಡು ಹೋದ. ಹೆಣಭಾರದ ಶಿಲುಬೆ! ಆತನ ಸುತ್ತ ನಾಲ್ಕು ಜನ ಸೈನಿಕರು. ಇಬ್ಬರು ಕಳ್ಳರೂ ಅವನೊಡನೆ ಶಿಲುಬೆ ಹೊತ್ತು ನಡೆದಿದ್ದರು.

ಕ್ರಿಸ್ತ ಬಳಲಿ ಬಾಯಾರಿದ್ದ. ಹಾಗಾಗಿ ಶಿಲುಬೆ ಹೊರಲಾರದೆ ಮೂರು ಕಡೆ ಬಿದ್ದುಬಿಟ್ಟ. ಮೂರನೆಯ ಸಾರಿ ಬಿದ್ದಾಗ ಸಿರೇನ್ ನಗರದ ಸಿಮೋನ್ ಕ್ರಿಸ್ತನಿಗೆ ನೆರವಾದ.

ರಣಬಿಸಿಲ ಬೇಗೆ. ಜನ ಸಾಲುಗಟ್ಟಿ ನೋಡುತ್ತಿದ್ದರು.

ಅವರ ಮಧ್ಯೆ ಕೆಲವು ಹೆಂಗಸರು ಅಳುತ್ತಿದ್ದರು. ಕ್ರಿಸ್ತನಿಗೆ ಅವರ ಅಳು ಕೇಳಿತು. ಜೆರುಸಲೇಮಿನ ಕುಮಾರಿಯರೇ ಕೇಳಿ. ನೀವು ನನಗಾಗಿ ಅಳಬೇಡಿ. ನಿಮ್ಮ ಮಕ್ಕಳಿಗಾಗಿ ಅಳಿ" ಎಂದ ಕ್ರಿಸ್ತ.

ಶಿಲುಬೆಗೆ ಏರಿಸಿದರು



ಶಿಲುಬೆಯ ಮೇಲೆ ಕ್ರಿಸ್ತ

ಕ್ರಿಸ್ತ ಶಿಲುಬೆ ಹೊತ್ತು ಗೊಲ್ಗೊಥ ತಲುಪಿದ. ಸೈನಿಕರು ಆತನ ಬಟ್ಟೆಗಳನ್ನು ಹರಿದರು. ಶಿಲುಬೆಯ ಮೇಲೆ ಆತನನ್ನು ಮಲಗಿಸಿದರು. ಅಡ್ಡ ದಿಮ್ಮಿಗೆ ಎಡ-ಬಲ ಕೈಗಳನ್ನು ಇರಿಸಿ ಮೊಳೆ ಹೊಡೆದರು. ಕಾಲುಗಳನ್ನು ಸೇರಿಸಿ ಉದ್ದದ ದಿಮ್ಮಿಯ ತುದಿಗೆ ಕಟ್ಟಿದರು.

ಶಿಲುಬೆಯನ್ನು ಮೇಲೆತ್ತಿ ನೆಲಕ್ಕೆ ಹೂತರು. ಕ್ರಿಸ್ತ ಶಿಲುಬೆಯ ಮೇಲೆ ತೂಗಾಡಿದ. "ಯೆಹೂದ್ಯರ ಅರಸ" ಎಂದು ಫಲಕ ಬರೆಸಿ ಶಿಲುಬೆಗೆ ತೂಗು ಹಾಕಿದರು.

ಕ್ರಿಸ್ತನನ್ನು ಶಿಲುಬೆಗೆ ತೂಗು ಹಾಕಿದಾಗ ನಟ್ಟನಡು ಮಧ್ಯಾಹ್ನ. ಕತ್ತಲೆ ಮುಸುಕುವ ಮೊದಲು ಕ್ರಿಸ್ತ ಮೂರು ಸಾರಿ ಮಾತಾಡಿದ್ದ. "ತಂದೆಯೇ, ಇವರು ಏನು ಮಾಡುತ್ತಿದ್ದಾರೆಂದು ಇವರಿಗೆ ತಿಳಿಯದು. ಇವರನ್ನು ಕ್ಷಮಿಸು" ಎಂದು ಶಿಲುಬೆಯ ಮೇಲಿಂದ ಹೇಳಿದ.

ಕ್ರಿಸ್ತನ ಅಂತಿಮ ಕಾಲ ಬಂತು. ಆತ "ಎಲ್ಲವೂ ಮುಗಿಯಿತು" ಎಂದ. "ತಂದೆಯೇ ನನ್ನ ಆತ್ಮವನ್ನು ನಿನಗೊಪ್ಪಿಸುತ್ತೇನೆ" ಎಂದು ಗಟ್ಟಿಯಾಗಿ ಕೂಗಿ ಪ್ರಾಣ ಬಿಟ್ಟ.

ಕ್ರಿಸ್ತ ಸತ್ತಿರುವುದನ್ನು ಖಚಿತಪಡಿಸಿಕೊಳ್ಳಬೇಕಿತ್ತು. ಅದಕ್ಕಾಗಿ ಸೈನಿಕರು ಆತನ ಪಕ್ಕೆಗೆ ಈಟಿಯಿಂದ ಇರಿದರು. ಕ್ರಿಸ್ತ ಸತ್ತಿದ್ದ. ಅಂದೇ ಆತನ ಹೆಣವನ್ನು ಹೂಳಲು ಪಿಲಾತ ಅಪ್ಪಣೆ ಕೊಟ್ಟ. ಗುಹೆಯಲ್ಲಿ ಕ್ರಿಸ್ತನ ಪಾರ್ಥಿವ ಶರೀರವನ್ನಿಟ್ಟರು. ಬಾಗಿಲಿಗೆ ದೊಡ್ಡ ಬಂಡೆಕಲ್ಲನ್ನು ಮುಚ್ಚಿದರು. ಬಂಡೆಗೆ ಸರ್ಕಾರದ ಮುದ್ರೆ ಹಾಕಿದರು. ಸೈನಿಕರು ಕಾವಲು ನಿಂತರು.

ಇದೆಲ್ಲಾ ನಡೆದದ್ದು ಶುಕ್ರವಾರದ ದಿನ. ಆ ದಿನವನ್ನೇ ಕ್ರೈಸ್ತರು "ಗುಡ್‌ಫ್ರೈಡೇ" ಅನ್ನುವುದು. ಅಂದರೆ "ಶುಭ ಶುಕ್ರವಾರ". ಆ ದಿನವೆಲ್ಲ ಕ್ರೈಸ್ತರಿಗೆ ದುಃಖದ ದಿನ. ಅಂದು ಅವರು ದಿನವೆಲ್ಲಾ ಉಪವಾಸವಿದ್ದು ಧ್ಯಾನ ಮಾಡುವರು.

ಮತ್ತೆ ಬದುಕಿ ಬಂದ

ಕ್ರಿಸ್ತನನ್ನು ಸಮಾಧಿ ಮಾಡಿ ಮೂರು ದಿನಗಳಾಗಿತ್ತು. ಶನಿವಾರ "ಸಬ್ಬತ್" ದಿನ. "ಸಬ್ಬತ್" ಎಂದರೆ "ಪವಿತ್ರ" ದಿನ. ಅಂದು ಯಾರೂ ಸಮಾಧಿಯ ಬಳಿಗೆ ಹೋಗುವಂತಿಲ್ಲ.

ಮಾರನೆಯ ದಿನ ಭಾನುವಾರ. ಬೆಳಗಿನ ಜಾವಕ್ಕೆ ಕೆಲವು ಮಹಿಳೆಯರು ಅಲ್ಲಿಗೆ ಬಂದರು. ಅವರು ಕ್ರಿಸ್ತನ ಶರೀರಕ್ಕೆ ಪರಿಮಳ ಪೂಸಬೇಕಿತ್ತು. ಅದು ಅವರ ಪದ್ಧತಿ. ಅವರು ಬಂದು ನೋಡುತ್ತಾರೆ. ಕ್ರಿಸ್ತ ಅಲ್ಲಿರಲಿಲ್ಲ. ಆತ ಮತ್ಯುಂಜಯನಾಗಿದ್ದ. ಮರುಜೀವ ಹೊಂದಿ ಕಾಣೆಯಾಗಿದ್ದ. ಈ ದಿನವನ್ನು ಕ್ರೈಸ್ತರು "ಈಸ್ಟರ್" ಎಂದು ಕರೆಯುತ್ತಾರೆ. ಹಬ್ಬ ಮಾಡುತ್ತಾರೆ. ಕ್ರಿಸ್ತ ಮತ್ತೆ ಕಾಣಿಸಿಕೊಂಡು ಭೂಮಿಯ ಮೇಲೆ ನಲವತ್ತು ದಿನ ಇದ್ದ. ಆ ಅವಧಿಯಲ್ಲಿ ಅನೇಕರಿಗೆ ದರ್ಶನ ಕೊಟ್ಟ. ಮಾತಾಡಿದ. ಕೆಲವರ ಜೊತೆ ಹಂಚಿಕೊಂಡು ಊಟ ಮಾಡಿದ. ನಮ್ಮ ನಿಮ್ಮಂತೇ ಇದ್ದ ಎಂದೆಲ್ಲಾ ನಂಬುತ್ತಾರೆ. ಈ ದಿನಗಳಲ್ಲಿ ಕ್ರಿಸ್ತ ಪೀಟರನಿಗೆ ಧೈರ್ಯ ತುಂಬಿದ. ಗುಡ್ಡದ ಮೇಲಕ್ಕೆ ಕರೆದೊಯ್ದ. ಆಶೀರ್ವಾದ ಮಾಡಿದ. ಮರುಕ್ಷಣದಲ್ಲಿ ಶಿಷ್ಯರ ಕಣ್ಣಿಗೆ ಕಾಣದಾದ ಎಂಬ ನಂಬಿಕೆ ಕ್ರೈಸ್ತರಲ್ಲಿ ಇದೆ. ಅದಕ್ಕೆಂದೇ ಆ ದಿನವನ್ನು ಕ್ರೈಸ್ತರು "ಮೋಕ್ಷಾರೋಹಣ ಹಬ್ಬ" ಎಂದು ಆಚರಿಸುತ್ತಾರೆ.

ಉಪದೇಶ

ನಾವು ನಮ್ಮ ಕರ್ತವ್ಯಗಳನ್ನು ತಕ್ಕ ಸಮಯದಲ್ಲಿ ಮಾಡಬೇಕು. ಶಕ್ತಿ ಇದ್ದಷ್ಟು ದುಡಿಯಬೇಕು. ಕಷ್ಟ ಸುಖಗಳನ್ನು ಒಂದೇ ರೀತಿ ನೋಡಬೇಕು. ಕರುಣೆ, ದಯೆ, ನಮ್ರತೆಗಳನ್ನು ಅಭ್ಯಾಸ ಮಾಡಬೇಕು. ಸಾಧು ಸ್ವಭಾವ, ಸರಳತೆ, ಬಡವರ ಮೇಲೆ ಪ್ರೀತಿ ಇವುಗಳನ್ನು ಪಾಲಿಸಬೇಕು. ಸಮಾಜದ ಉದ್ಧಾರಕ್ಕೆ ಶ್ರಮಿಸಬೇಕು. ಇಂಥ ಸದ್ಗುಣಗಳನ್ನು ಬೆಳಿಸಿಕೊಳ್ಳಬೇಕು ಎಂಬುದೇ ಕ್ರಿಸ್ತನ ಉಪದೇಶದ ಸಾರ.

ಕ್ರಿಸ್ತನ ಬೋಧನೆಗಳಲ್ಲಿ "ಪರ್ವತ ಪ್ರಸಂಗ" ಪ್ರಸಿದ್ಧವಾದುದು. ಕ್ರೈಸ್ತರು ಉಪದೇಶವನ್ನು "ಪ್ರಸಂಗ" ಎನ್ನುವರು. ಪರ್ವತದ ಮೇಲೆ ಮಾಡಿದ ಪ್ರಸಂಗ "ಪರ್ವತ

ಪ್ರಸಂಗ". ಗಾಂಧೀಜಿಯವರು ಇದನ್ನು ಬಹಳ ಮೆಚ್ಚಿಕೊಂಡಿದ್ದರು. ಇದನ್ನು "ಎಂಟು ಭಾಗ್ಯಗಳು" ಎಂತಲೂ ಕ್ರೈಸ್ತರು ಕರೆಯುತ್ತಾರೆ. ಅವುಗಳೆಂದರೆ:

೧. ಆತ್ಮದಲ್ಲಿ ಬಡವರಾದವರು ಧನ್ಯರು;
ಪರಲೋಕ ರಾಜ್ಯ ಅವರದು.

೨. ದುಃಖಿಗಳು ಧನ್ಯರು;
ಅವರು ಸಮಾಧಾನ ಪಡೆಯುವರು.

೩. ಶಾಂತವಾಗಿರುವವರು ಧನ್ಯರು:
ಅವರು ಭೂ ಒಡೆಯರಾಗುವರು.

೪. ನೀತಿಗಾಗಿ ಹಸಿದು, ಬಾಯಾರಿದವರು ಧನ್ಯರು;
ಅವರಿಗೆ ತೃಪ್ತಿ ಉಂಟಾಗುವುದು.

೫. ಕರುಣೆಯುಳ್ಳವರು ಧನ್ಯರು;
ಅವರು ಕರುಣೆ ಹೊಂದುವರು.

೬. ನಿರ್ಮಲ ಚಿತ್ತರು ಧನ್ಯರು;
ಅವರು ದೇವರನ್ನು ನೋಡುವರು.

೭. ಸಮಾಧಾನ ಪಡಿಸುವವರು ಧನ್ಯರು;
ಅವರು ದೇವರ ಮಕ್ಕಳೆನಿಸಿಕೊಳ್ಳುವರು.

೮. ನೀತಿಗಾಗಿ ಹಿಂಸೆ ತಾಳಿಕೊಳ್ಳುವವರು ಧನ್ಯರು;
ಪರಲೋಕ ರಾಜ್ಯವು ಅವರದು.

ಸಾಮತಿಗಳು

ಕ್ರಿಸ್ತ ತನ್ನ ಉಪದೇಶವನ್ನು ಉದಾಹರಣೆಗಳ ಮೂಲಕ ಹೇಳಿದ. ಅದನ್ನು ಕ್ರೈಸ್ತರು "ಸಾಮತಿಗಳು" ಎನ್ನುತ್ತಾರೆ. ಅವುಗಳಲ್ಲಿ ಸಂಕ್ಷಿಪ್ತ ಸಾಮತಿಗಳು ಸುಮಾರು ಅರವತ್ತು ಇವೆ. ಉದಾಹರಣೆಗೆ:

೧. ಬೆಳೆಯೇನೋ ಹೇರಳ; ಆದರೆ ಕೊಯ್ಯುವವರು ವಿರಳ.

೨. ಬೇರು ಸಹಿತ ಕಿತ್ತ ಗಿಡಗಳು ಮತ್ತು ಅಂಧರಿಗೆ ಅಂಧಗುರು.

೩. ಹೆಣವಿದ್ದಲ್ಲಿ ರಣ ಹದ್ದುಗಳು.

೪. ರೋಗಿಗಳನ್ನು ಗುಣಪಡಿಸಲು ವೈದ್ಯರಿಗೆ ಕರೆ.

ಸವಿವರ ಸಾಮತಿಗಳು ಸುಮಾರು ಮೂವತ್ತೆರಡು. ಬಿತ್ತುವವನು, ಸಾಸಿವೆಕಾಳು, ಹೂಳಿಟ್ಟ ನಿಧಿ, ಕಾಣದೆ ಹೋದ ಕುರಿ, ದುಂದುಗಾರ ಮಗ ಮುಂತಾದವು ಮುಖ್ಯವಾಗಿವೆ. ಉದಾಹರಣೆಗೆ:

೧. ಕೇಳುವ ಮಗ

ಮಗ ಮೀನನ್ನು ಕೇಳಿದರೆ ಯಾವ ತಂದೆ ತಾನೆ ಹಾವನ್ನು ಕೊಡುವನು? ಮೊಟ್ಟೆಯನ್ನು ಕೇಳಿದರೆ ಚೇಳನ್ನು ಕೊಡುವನು? ಕೆಟ್ಟವರಾದ ನೀವು ಮಕ್ಕಳಿಗೆ ಒಳ್ಳೆಯ ಪದಾರ್ಥಗಳನ್ನು ಕೊಡುತ್ತೀರಿ. ನಿಮಗಿಂತಲೂ ಹೆಚ್ಚಾದವನು ಪರಲೋಕದ ತಂದೆ. ಆತನನ್ನು ನೀವು ಕೇಳಿಕೊಂಡರೆ ನಿಮಗೆ ಪವಿತ್ರಾತ್ಮವನ್ನು ಕೊಡುವನು.

೨. ಇಬ್ಬರು ಕಟ್ಟಡಗಾರರು

ನನ್ನ ಈ ಮಾತನ್ನು ಕೇಳಿ. ಅದರಂತೆ ನಡೆಯಿರಿ. ಅವರು ಬಂಡೆಯ ಮೇಲೆ ಮನೆ ಕಟ್ಟಿಕೊಂಡ ಬುದ್ಧಿವಂತನಂತಿರುವರು. ಮಳೆ ಬಂದು, ನೆರೆ ಬಂದು, ಬಿರುಗಾಳಿ ಬೀಸಿದರೂ ಮನೆಗೆ ಅಪಾಯವಿಲ್ಲ. ಕಾರಣ ಅದರ ಅಡಿಪಾಯ ಬಂಡೆಯ ಮೇಲಿದೆ.

ನನ್ನ ಈ ಮಾತನ್ನು ಕೇಳದೆ, ಕೇಳಿದರೂ ಅದರಂತೆ ನಡೆಯದೆ ಇರುವಾತನು ಮರಳಿನ ಮೇಲೆ ಮನೆಕಟ್ಟಿಕೊಂಡವನಂತೆ. ಅವನು ಬುದ್ಧಿಹೀನ. ಮಳೆ ಬಂದು ನೆರೆಬಂದು, ಬಿರುಗಾಳಿ ಬೀಸಿದರೆ ಅಂಥ ಮನೆ ಕುಸಿದು ನೆಲಸಮವಾಗುತ್ತದೆ.

೩. ಬೆಟ್ಟದ ಮೇಲಿನ ಪಟ್ಟಣ

ನೀವು ಜಗತ್ತಿನ ಬೆಳಕನ್ನೂ ಬೆಟ್ಟದ ಮೇಲಿನ ಪಟ್ಟಣವನ್ನೂ ಮುಚ್ಚಿಡಲಾಗುತ್ತದೆಯೆ? ಹಾಗೇ ದೀಪವನ್ನು ಹಚ್ಚಿ ಕೊಳಗದ ಕೆಳಗಿಡುತ್ತಾರೆಯೆ? ದೀಪ ಸ್ಥಂಭದ ಮೇಲಿಡುತ್ತಾರೆ. ಆಗ ಅದು ಮನೆಯ ಎಲ್ಲರಿಗೂ ಬೆಳಕು ಕೊಡುತ್ತದೆ.

ದೇವರ ರಾಜ್ಯ ಉದಯವಾಗುತ್ತಿದೆ. ಪಾಪದ ಕೆಲಸಗಳನ್ನು ಮಾಡಬೇಡಿ. ಶುಭ ವಿಚಾರಗಳನ್ನು ಕೇಳಿ. ದೇವರಿಗೆ ನಿಮ್ಮ ಮೇಲೆ ಪ್ರೀತಿ ಇದೆ. ಆತನನ್ನು ನಂಬಿ. ಭಯವನ್ನು ದೂರಮಾಡಿ. ನಿಮ್ಮನ್ನು ನೀವು ಪ್ರೀತಿಸುವಂತೆ ಪರರನ್ನೂ ಪ್ರೀತಿಸಿ. ಒಂದು ಕೆನ್ನೆಗೆ ಹೊಡೆಯುವವನಿಗೆ ಮತ್ತೊಂದು ಕೆನ್ನೆಯನ್ನೂ ತೋರಿ. ನಿಮ್ಮ ಶಾಲನ್ನು ಕೇಳಿದವನಿಗೆ ನಿಮ್ಮ ಮೇಲಂಗಿಯನ್ನೂ ಕೊಡಿ. ನಮ್ಮ ವೈರಿಗಳನ್ನು ಪ್ರೀತಿಸಿ. ನಿಮಗೆ ಯಾರ ಮೇಲಾದರೂ ಮನಸ್ತಾಪವಿದ್ದರೆ, ಗುಡಿಗೆ ಹೋಗುವ ಮೊದಲು ಅವರೊಡನೆ ಸಂಧಾನ ಮಾಡಿಕೊಳ್ಳಿ. ಈ ಭೂಮಿಯ ಮೇಲೆ ಸಂಪತ್ತನ್ನು ಕೂಡಿಡಬೇಡಿ. ಅದನ್ನು ಕಳ್ಳರು ಕದಿಯಬಹುದು. ಹುಳು ತಿಂದು ಹಾಳು ಮಾಡಬಹುದು. ನಿಮ್ಮ ಆಸ್ತಿಯ ಹಿಂದೆಯೇ ನಿಮ್ಮ ಜೀವ ಸುತ್ತುತ್ತಿರುತ್ತದೆ. ಇದರಿಂದ ನಿಮಗೆ ಶಾಂತಿ ಹೇಗೆ ಬರಬೇಕು? ದೇವರ ಸೇವೆ ಹಾಗೂ ಸಂಪತ್ತಿನ ಸೇವೆ ಒಟ್ಟಿಗೆ ಸಾಧ್ಯವಿಲ್ಲ. ಇದು ಕ್ರಿಸ್ತನ ಬೋಧನೆಯ ಸಾರ.

ಕ್ರೈಸ್ತರು

ಕ್ರಿಸ್ತನ ಉಪದೇಶಗಳನ್ನು ಆಚರಿಸುವವರು ಕ್ರೈಸ್ತರು. ಕ್ರೈಸ್ತರ ದೇವಾಲಯಕ್ಕೆ "ಚರ್ಚ್" ಎಂದು ಹೆಸರು. ಇಲ್ಲಿನ ಪೂಜಾರಿಗಳನ್ನು ಪಾದ್ರಿಗಳೆನ್ನುತ್ತಾರೆ. ಫ್ರೆಂಚರ ಭಾಷೆಯಲ್ಲಿ"ಪಾದ್ರಿ" ಎಂದರೆ "ಗುರು" ಅಥವಾ "ತಂದೆ" ಎಂದು ಅರ್ಥ. ಕ್ರೈಸ್ತರ ಧರ್ಮಗ್ರಂಥ ಬೈಬಲ್.

"ತೋಮಸ್" ಎಂಬುವನು ಕ್ರಿಸ್ತನ ಒಬ್ಬ ಶಿಷ್ಯ. ಈತ ಭಾರತಕ್ಕೆ ಬಂದು ಕ್ರೈಸ್ತ ಧರ್ಮ ಪ್ರಚಾರ ಮಾಡಿದ ಎಂದು ಹೇಳುತ್ತಾರೆ.

ಪ್ರಪಂಚದ ಪ್ರಮುಖ ಧರ್ಮಗಳಲ್ಲಿ ಕ್ರೈಸ್ತಧರ್ಮವೂ ಒಂದು. ಪ್ರಪಂಚದಲ್ಲಿ ಈಗ ಸುಮಾರು ನೂರು ಕೋಟಿ ಕ್ರೈಸ್ತರು ಇದ್ದಾರೆ. ಅವರಲ್ಲಿ ಎರಡು ಮುಖ್ಯ ಪಂಗಡಗಳಿವೆ. ಅವುಗಳೆಂದರೆ "ರೋಮನ್ ಕೆಥೋಲಿಕ್" ಮತ್ತು "ಪ್ರೊಟೆಸ್ಟಂಟ್" ಪಂಗಡಗಳು.

ಕ್ರೈಸ್ತರು ಹಲವಾರು ಹಬ್ಬಗಳನ್ನು ಆಚರಿಸುತ್ತಾರೆ. ಅವುಗಳಲ್ಲಿ ಕ್ರಿಸ್ತ ಜನ್ಮದಿನವಾದ "ಕ್ರಿಸ್ಮಸ್", "ಈಸ್ಟರ್" ಮತ್ತು" ಗುಡ್‌ಫ್ರೈಡೇ" ಮುಖ್ಯವಾದವು.

ಕ್ರಿಸ್ತ ಹುಟ್ಟಿದ ದಿನದಿಂದ ಇಸವಿಗಳನ್ನು ಎಣಿಸುವ ಪರಿಪಾಠವಿದೆ. ಇದನ್ನು ಕ್ರಿಸ್ತ ಶಕೆ ಎನ್ನುತ್ತಾರೆ. ಕ್ರಿಸ್ತನು ಹುಟ್ಟಿದ ಇಷ್ಟು ವರ್ಷಗಳಾದವು ಎಂದು ಇದಕ್ಕೆ ಅರ್ಥ.

***

ಕನ್ನಡ ವಿಶ್ವವಿದ್ಯಾಲಯವು ನವಸಾಕ್ಷರರಿಗೆ ಮತ್ತು ಪ್ರಾಥಮಿಕ ಹಂತದಿಂದ ಪದವಿ ಮಟ್ಟದವರೆಗೆ ಉತ್ತಮ ಹಾಗೂ ಉಪಯುಕ್ತವಾದ ಪಠ್ಯಪುಸ್ತಕಗಳನ್ನು ನಿರ್ಮಾಣ ಮಾಡುವ ಸಲುವಾಗಿ 'ಪಠ್ಯಪುಸ್ತಕ ರಚನಾ ವಿಭಾಗ'ವನ್ನು ತೆರೆದಿದೆ. ಇದರ ಮೊದಲ ಪ್ರಯತ್ನವಾಗಿ ನವಸಾಕ್ಷರರಿಗಾಗಿ ಪಠ್ಯಪುಸ್ತಕ ರಚನೆ ಮಾಡಬೇಕೆಂದು ಚಿಂತಿಸುತ್ತಿರುವಾಗ ಬೆಂಬಲಕ್ಕೆ ಬಂದುದು ಲೋಕ ಶಿಕ್ಷಣ ಇಲಾಖೆ: ನವಸಾಕ್ಷರರಿಗಾಗಿ ಪುಸ್ತಕ ಬರೆಸುವ ತಮ್ಮಲ್ಲಿದ್ದ ಯೋಜನೆಯನ್ನು ಅವರು ನಮ್ಮ ವಿಶ್ವವಿದ್ಯಾಲಯಕ್ಕೆ ವಹಿಸಿಕೊಟ್ಟರು. ವಿಶ್ವವಿದ್ಯಾಲಯವು ಈ ಯೋಜನೆಯನ್ನು ಸಂತಸದಿಂದ ಸ್ವೀಕರಿಸಿ, ಕೂಡಲೇ ನಾಡಿನ ಪ್ರಖ್ಯಾತ ಲೇಖಕರನ್ನು, ಭಾಷಾತಜ್ಞರನ್ನು, ಶಿಕ್ಷಣತಜ್ಞರನ್ನು ಒಳಗೊಂಡಂತೆ ಸಲಹಾ ಸಮಿತಿಯನ್ನು ರಚಿಸಿ, ಅವರೆಲ್ಲರ ಅಭಿಪ್ರಾಯ, ಸಲಹೆ, ಸಹಕಾರಗಳನ್ನು ಕೇಳಿ ಕಾರ್ಯೋನ್ಮುಖವಾಯಿತು. ಪುಸ್ತಕಗಳ ವಸ್ತು, ಭಾಷೆ, ಮುದ್ರಣ ವಿನ್ಯಾಸ, ಚಿತ್ರಗಳ ಮಹತ್ವ, ಸಾಹಿತ್ಯಕ ಗುಣಮಟ್ಟ ಇತ್ಯಾದಿಗಳನ್ನು ಕುರಿತು ಸಮಿತಿಯು ಅನೇಕ ಸಲ ಚರ್ಚಿಸಿ ಯೋಜನೆಯನ್ನು ಅನುಷ್ಠಾನಗೊಳಿಸಲು ಸೂಚಿಸಿತು.

ನವಸಾಕ್ಷರರಿಗಾಗಿ ಕನ್ನಡದಲ್ಲಿ ಹಾಗೂ ದೇಶದ ಇತರ ಭಾಷೆಗಳಲ್ಲಿ ಈಗಾಗಲೇ ಪ್ರಕಟವಾಗಿರುವ ಪುಸ್ತಕಗಳನ್ನೆಲ್ಲ ಒಟ್ಟುಗೂಡಿಸಿ, ಅವುಗಳ ಮಾದರಿ, ಮಾಹಿತಿಗಳನ್ನೆಲ್ಲ ಭಾಷಾತಜ್ಞರಿಂದ ಪರಿಶೀಲಿಸಲಾಯಿತು. ಜೊತೆಗೆ ಈ ಕ್ಷೇತ್ರದ ಅನುಭವಿ ಕ್ಷೇತ್ರಸಹಾಯಕರನ್ನು ನೇಮಿಸಿಕೊಂಡು ಅವರಿಗೆ ಕಮ್ಮಟಗಳನ್ನು ನಡೆಸಿ, ಪ್ರಶ್ನಾವಳಿ ತಯಾರಿಸಿಕೊಟ್ಟು, ಅವರನ್ನು ರಾಜ್ಯದಾದ್ಯಂತ ಆಯ್ದ ಜಿಲ್ಲೆ, ತಾಲೂಕುಗಳಿಗೆ ಕಳುಹಿಸಿ ಈ ಆಂದೋಲನದಲ್ಲಿ ಕಲಿತವರಿಂದ ಮತ್ತು ಕಲಿಯುತ್ತಿರುವವರಿಂದ ಅದರ ಗುಣದೋಷಗಳ ಬಗ್ಗೆ ಅಭಿಪ್ರಾಯ ಸಲಹೆಗಳನ್ನು ಸಂಗ್ರಹಿಸಿ, ಅನಂತರ ಅವುಗಳನ್ನೆಲ್ಲ ವಿಶ್ವವಿದ್ಯಾಲಯದ ಗಣಕಯಂತ್ರದಲ್ಲಿ ವಿಶ್ಲೇಷಿಸಲಾಯಿತು; ಮತ್ತೆ ಮತ್ತೆ ಕ್ಷೇತ್ರಗಳಿಗೆ ಹೋಗಿ, ಕ್ಷೇತ್ರ ಸಹಾಯಕರು ನೀಡಿದ್ದ ಮಾಹಿತಿಗಳನ್ನೆಲ್ಲ ಮರು ಪರಿಶೀಲನೆ ಮಾಡಿ, ನಂತರ ನವಸಾಕ್ಷರರ ಅಪೇಕ್ಷೆಗೆ ಅನುಗುಣವಾಗಿ ವಿಷಯದ ಆದ್ಯತೆಗಳನ್ನು ನಿರ್ಧರಿಸಿಕೊಂಡು ಪುಸ್ತಕ ರಚನೆಗೆ ತೊಡಗಲಾಯಿತು; ಪ್ರಖ್ಯಾತ ಲೇಖಕರು ನಮ್ಮ ವಿಶ್ವವಿದ್ಯಾಲಯದ ಪ್ರಾಧ್ಯಾಪಕರ ಜೊತೆ ಚರ್ಚಿಸಿ ತಮ್ಮ ಹಸ್ತಪ್ರತಿಗಳಿಗೆ ಅಂತಿಮ ರೂಪ ಕೊಟ್ಟರು. ಕಲಾವಿದರು ವಿಷಯಗಳಿಗೊಪ್ಪುವ ಚಿತ್ರಗಳನ್ನು ಬರೆದುಕೊಟ್ಟರು. ಹೀಗೆ ಸಿದ್ಧಗೊಂಡ ಹಸ್ತಪ್ರತಿಗಳನ್ನು ನವಸಾಕ್ಷರರ ಬಳಿ ಕೊಂಡೊಯ್ದು ಅವರ ಮುಂದೆ ಪಠಿಸಿ ನಂತರ ಅವರ ಅಭಿಪ್ರಾಯ, ಪ್ರತಿಕ್ರಿಯೆಗಳನ್ನು ಅಳವಡಿಸಿ ಹಸ್ತಪ್ರತಿಯನ್ನು ಅಂತಿಮಗೊಳಿಸಲಾಯಿತು.

ನಮ್ಮ ಬಹುಸಂಖ್ಯಾತ ಸಮುದಾಯ ಅನಕ್ಷರಸ್ಥರೇ ಹೊರತು ಅವಿದ್ಯಾವಂತರಲ್ಲ. ನೃಪತುಂಗ ಹೇಳುವಂತೆ ಅವರು "ಚದುರರ್ ನಿಜದಿಂ ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್". ಅನುಭವದಲ್ಲಿ, ವಿವೇಕದಲ್ಲಿ, ವ್ಯವಹಾರದಲ್ಲಿ, ತಿಳುವಳಿಕೆಯಲ್ಲಿ ಆ ಜನ ಚದುರರು. ಹೀಗೆಂದು ಅವರನ್ನು ಅಕ್ಷರದಲಿತರನ್ನಾಗಿಯೂ ಉಳಿಸುವಂತಿಲ್ಲ. ಅವರಲ್ಲಿ ಅಕ್ಷರ ಕಲಿಯುವ ಸಾಮರ್ಥ್ಯವಿದೆ. ಕಲಿಸುವ ಹೊಣೆ ಸರ್ಕಾರಗಳ, ವಿಶ್ವವಿದ್ಯಾಲಯಗಳ ಮೇಲಿದೆ. ಈ ನಿಟ್ಟಿನಲ್ಲಿ ದೇಶದಾದ್ಯಂತ ಸಾಕ್ಷರತಾ ಆಂದೋಲನ ನಡೆಯುತ್ತಿದೆ. ಆದರೆ ಈ ಅಕ್ಷರ ಸಂಸ್ಕೃತಿಯ ಆಂದೋಲನದಲ್ಲಿ ಕಲಿತವರಿಗೆ ಮತ್ತು ಕಲಿಯುವವರಿಗೆ ಉತ್ತಮ ಗುಣಮಟ್ಟದ ಪುಸ್ತಕಗಳ ಅವಶ್ಯಕತೆ ಇದೆ. ಕಲಿತವರು ಮರೆಯದಂತೆ, ಕಲಿಕೆಯನ್ನು ಮುಂದುವರಿಸುವಂತೆ ನೋಡಿ ಕೊಳ್ಳುವುದು ಎಲ್ಲರ ಕರ್ತವ್ಯ.

ಕನ್ನಡ ವಿಶ್ವವಿದ್ಯಾಲಯವು ನಾಡಿನ ಹಲವು ವಿದ್ವಾಂಸರೊಂದಿಗೆ ಸೇರಿ ನಡೆಸಿದ ಒಂದು ಸಾಮೂಹಿಕ ಪ್ರಯತ್ನದ ಫಲವಾಗಿ ಈ ಪುಸ್ತಕ ರೂಪತಾಳಿದೆ. ನವಸಾಕ್ಷರರು ಈ ಪುಸ್ತಕವನ್ನು ಪ್ರೀತಿಯಿಂದ ಸ್ವೀಕರಿಸುತ್ತಾರೆಂದು ನಂಬಿದ್ದೇವೆ. ಈ ಯೋಜನೆಯ ಯಶಸ್ಸಿಗೆ ಕಾರಣರಾಗಿರುವ ಉನ್ನತ ಸಲಹಾ ಸಮಿತಿ ಹಾಗೂ ಸಂಪಾದಕ ಸಮಿತಿಯ ಸದಸ್ಯರಿಗೆ, ಲೇಖಕರಿಗೆ, ಕಲಾವಿದರಿಗೆ ಹಾಗೂ ಈ ಯೋಜನೆಯಲ್ಲಿ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ನಮ್ಮೊಡನೆ ಪಾಲ್ಗೊಂಡವರೆಲ್ಲರಿಗೂ ನಮ್ಮ ಹೃತ್ಪೂರ್ವಕವಾದ ವಂದನೆಗಳು. ನಮ್ಮ ವಿಶ್ವವಿದ್ಯಾಲಯದ ಮೇಲೆ ವಿಶ್ವಾಸವಿಟ್ಟು ಇಂತಹ ಒಂದು ಗುರುತರವಾದ ಯೋಜನೆಯನ್ನು ವಹಿಸಿಕೊಟ್ಟ ಲೋಕಶಿಕ್ಷಣ ಇಲಾಖೆಯ ನಿರ್ದೇಶಕರಾದ ಶ್ರೀ ಲೂಕೋಸ್ ವಲ್ಲತ್ತರೈ ಅವರಿಗೆ ನನ್ನ ಕೃತಜ್ಞತೆಗಳು. ಓದುಗರು ಈ ಪುಸ್ತಕದ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ತಿಳಿಸಿದರೆ ನಮ್ಮ ಪಠ್ಯಪುಸ್ತಕ ರಚನೆಗೆ ಉಪಯೋಗವಾಗುತ್ತದೆ.

ಚಂದ್ರಶೇಖರ ಕಂಬಾರ
ಕುಲಪತಿಗಳು